ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1994.

# *ಹೊಸ ವರ್ಷವನ್ನು ಶುಭ ಭಾವನೆ, ಗುಣ ಸ್ವರೂಪ ವರ್‌ಷವನ್ನಾಗಿ ಆಚರಿಸಿ.*

(नये वर्ष को शुभ भावना, गुण स्वरूप वर्ष के रूप में मनाओ)

ಇಂದು ನವಯುಗದ ರಚಯಿತ ಬಾಪ್‌ದಾದಾರವರು ತನ್ನ ನವಯುಗ ರಾಜ್ಯಾಧಿಕಾರಿ ಮಕ್ಕಳನ್ನು ನೋಡುತ್ತಿದ್ದಾರೆ. ನವ ವರ್ಷವನ್ನು ನೋಡಿ ನಿಮ್ಮ ನವಯುಗ ನೆನಪಿಗೆ ಬರುತ್ತದೆಯೇ? ನವಯುಗದ ಮುಂದೆ ಈ ನವವರ್ಷಯಾವ ದೊಡ್ಡ ಮಾತಲ್ಲ. ನವಯುಗದಲ್ಲಿ ಪ್ರತಿ ವಸ್ತು, ಪ್ರತಿ ವ್ಯಕ್ತಿ, ಪ್ರಕೃತಿ ಎಲ್ಲವೂ ಹೊಸದಾಗಿರುತ್ತದೆ. ಹೊಸ ವರ್ಷದಲ್ಲಿ ಹಳೆಯ ವಸ್ತು ಹಾಗೂ ವ್ಯಕ್ತಿಯ ಹಳೆಯ ಸ್ವಭಾವ ಸಂಸ್ಕಾರ, ಹಾವಭಾವ  ಕೆಲವು ಹಳೆಯದಾಗಿರುತ್ತದೆ, ಕೆಲವು ಹೊಸದಾಗಿರುತ್ತದೆ. ಆದರೆ ನಿಮ್ಮ ನವಯುಗದಲ್ಲಿ ಹಳೆಯ ವಸ್ತುವಿನ ನಾಮ, ರೂಪಗಳಿರುವುದಿಲ್ಲ. ಹೊಸದಾಗುತ್ತದೆ ಹೊಸ ವ್ಯಕ್ತಿಗಳು ಅರ್ಥಾತ್ ಎಲ್ಲರೂ ಸತೋಪ್ರಧಾನರಾಗಿರುತ್ತಾರೆ ಹಾಗೂ ಪ್ರಕೃಯೂ ಸಹ ಸತೋಪ್ರಧಾನ ಅರ್ಥಾತ್ ಹೊಸದಾಗಿರುತ್ತದೆ. ಪ್ರಕೃತಿಯಲ್ಲಿಯೂ ಸಹ ಇಲ್ಲಿಯ ತರಹ ಹಳೆಯತನ ಇರುವುದಿಲ್ಲ. ಆದ್ದರಿಂದ  ನವಯುಗದ ಶುಭಾಶಯಗಳ ಜೊತೆಗೆ ನವವರ್ಷದ ಶುಭಾಶಯಗಳು.

ಇಂದು ವಿಶೇಷ ನವ ವರ್ಷವನ್ನು ಆಚರಿಸುವ ಉತ್ಸಾಹ ಉಲ್ಲಾಸದಿಂದ, ಖುಷಿ ಖುಷಿಯಿಂದ ಎಲ್ಲರೂ ತಲುಪಿಬಿಟ್ಟಿದ್ದೀರಿ, ಬಾಪ್‌ದಾದಾರವರು ಸಹ ಹೃದಯದಿಂದ ಹೃದಯದ ಆಶೀರ್ವಾದಗಳ ಸಹಿತ ನವಯುಗದ ಹಾಗೂ ಹೊಸ ವರ್ಷದ ಡಬಲ್ ಶುಭಾಶಯಗಳನ್ನು ಕೊಡುತ್ತಿದ್ದಾರೆ. ನಿಮ್ಮೆಲ್ಲರಿಗೂ ಸಹ ಡಬಲ್ ಸ್ಮೃತಿಯಿದೆಯೇ ಅಥವಾ ಸಿಂಗಲ್ ಸ್ಮೃತಿಯಿದೆಯೇ? ತಮ್ಮ ಹೊಸ ಯುಗ ನಯನಗಳ ಮುಂದೆ ಬುದ್ಧಿಯಲ್ಲಿ ಸ್ಪಷ್ಟವಾಗಿದೆಯಲ್ಲವೇ? ನಾಳೆಯಿಂದ ಹೊಸ ವರ್ಷ ಶುರುವಾಗುತ್ತದೆ ಎಂದು ಹೇಳಿದಂತೆ ನಾಳೆಯಿಂದ ನವಯುಗ ಬಂದಿತೆಂದರೆ ಬಂದಿತು- ಇಷ್ಟು ಸ್ಪಷ್ಟವಾಗಿದೆಯೇ? ನಶೆ ಇದೆಯೇ? ಎಲ್ಲರೂ ನವಯುಗದ ರಾಜ್ಯ ಅಧಿಕಾರಿಯಾಗಿದ್ದೀರಾ? ಎಲ್ಲರೂ ರಾಜರು ಹಾಗಾದರೆ ಪ್ರಜೆಗಳನ್ನು ತಯಾರಿಸಿದ್ದೀರಾ? ನೀವೆಲ್ಲರೂ ರಾಜರಾದರೆ ರಾಜ್ಯ ಯಾರ ಮೇಲೆ ಮಾಡುತ್ತೀರಿ? ತಮ್ಮ ಮೇಲೆಯೇ! ಬಾಪ್‌ದಾದಾರವರು ನವಯುಗ ಹಾಗೂ ಹೊಸ ವರ್ಷವನ್ನು ಡಬಲ್ ಆಗಿ ನೋಡುತ್ತಿದ್ದಾರೆ. ನಿನ್ನೆಯ ಮಾತಾಗಿದೆ ಅಲ್ಲವೇ, ಅದು ಸಹ ನೆನ್ನೆಯ ಮಾತಾಗಿದೆ ಹಾಗೂ ಇದು ಸಹ ನೆನ್ನೆಯ ಮಾತಾಗಿದೆ. ಮತ್ತೆ ನವಯುಗ ಬರುತ್ತದೆಯಲ್ಲವೇ! ನಿಮ್ಮ ನವಯುಗದ ವಸ್ತ್ರ( ಶರೀರ) ಎದುರಿಗೆ ಕಾಣಿಸುತ್ತದೆಯೇ? ಈಗಲೇ ಹಳೆಯ ವಸ್ತ್ರ ಬಿಡುತ್ತೇವೆ ಹಾಗೂ ಹೊಸ ವಸ್ತ್ರ ಧಾರಣೆ ಮಾಡುತ್ತೇವೆ. ಆ ವಸ್ತ್ರ ಚೆನ್ನಾಗಿರುತ್ತದೆ. ಹೊಳೆಯುತ್ತಾ ಸುಂದರವಾಗಿರುತ್ತದೆ ಅಲ್ಲವೇ! ಈಗಂತೂ ನೋಡಿ ಪ್ರತಿ ವ್ಯಕ್ತಿಯಲ್ಲಿ ಯಾವುದಾದರೂ ಒಂದು ಲೋಪ ಇದ್ದೇ ಇರುತ್ತದೆ. ಕೆಲವರ ಮೂಗು

ಡೊಂಕಾಗಿರುತ್ತದೆ. ಕೆಲವರ ಕಣ್ಣು ಡೊಂಕಾಗಿರುತ್ತದೆ. ಕೆಲವರ ತುಟಿ ಹೀಗಿರುತ್ತದೆ ಹಾಗೂ ನವಯುಗದಲ್ಲಿ ಎಲ್ಲವೂ ನಂಬರ್‌ವನ್, ಪ್ರತಿ ಕರ್ಮೇಂದ್ರಿಯ ಆಕ್ಯುರೇಟ್. ಎಂದ ಮೇಲೆ ಇಂತಹ ವಸ್ತ್ರ ಎದುರಿಗೆ ನೇತಾಡುತ್ತಿದೆಯಲ್ಲವೇ? ಕೇವಲ ಧರಿಸಬೇಕು. ತಮ್ಮ ವಸ್ತ್ರ ಚೆನ್ನಾಗಿದೆಯಲ್ಲವೇ, ಇಷ್ಟವಾಗುತ್ತಿದೆಯೇ? ನೋಡುತ್ತಿದ್ದೀರಲ್ಲವೇ?

ಬಾಪ್‌ದಾದಾ ಪ್ರತಿಯೊಂದು ಮಗುವನ್ನು ನೋಡಿದಾಗಲೆಲ್ಲಾ ಏನನ್ನು ನೋಡುತ್ತಾರೆ? ಒಂದಂತೂ ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಹೊಳೆಯುತ್ತಿರುವ ಮಣಿ ಶ್ರೇಷ್ಠ ಆತ್ಮನನ್ನು ನೋಡುತ್ತಾರೆ ಹಾಗೂ ಜೊತೆ-ಜೊತೆಯಲ್ಲಿ ಪ್ರತಿಯೊಂದು ಮಗುವಿನ ಭಾಗ್ಯದ ಶ್ರೇಷ್ಠ ರೇಖೆಯನ್ನು ನೋಡುತ್ತಾರೆ. ಪ್ರತಿಯೊಬ್ಬರ ಭಾಗ್ಯ ಎಷ್ಟು ಶ್ರೇಷ್ಠವಾಗಿದೆ ಅಲ್ಲವೇ! ಅಥವಾ ಕೆಲವರ ಭಾಗ್ಯ ಮಧ್ಯಮವಾಗಿದೆಯೇ? ಎಲ್ಲರೂ ನಂಬರ್‌ವನ್ ಆಗಿದ್ದೀರಾ? ಸೆಕೆಂಡ್, ಥರ್ಡ್ ಬರುವವರಿದ್ದಾರೆಯೇ? ಒಳ್ಳೆಯದು, ಪ್ರಪಂಚದವರು ಹೇಳುತ್ತಾರೆ ನಿಮ್ಮ ಬಾಯಲ್ಲಿ ಗುಲಾಬಿ ಎಂದು ಆದರೆ ಬಾಪ್‌ದಾದಾರವರು ಹೇಳುತ್ತಾರೆ ನಿಮ್ಮ ಬಾಯಲ್ಲಿ ಗುಲಾಬ್-ಜಾಮೂನು. ಗುಲಾಬ್ ಜಾಮೂನು ಎಲ್ಲರಿಗೂ ಬಹಳ ಇಷ್ಟವಾಗುತ್ತದೆಯಲ್ಲವೇ? ಗುಲಾಬ್ ಜಾಮೂನು ಅಥವಾ ಸಿಹಿಯನ್ನು ತಿನ್ನಿಸುವುದಕ್ಕಾಗಿಯೇ ಬಾಪ್‌ದಾದಾರವರು ಪ್ರತಿ ಗುರುವಾರ ಭೋಗವನ್ನು ಇಡಿಸಿದ್ದಾರೆ. ಭೋಗವನ್ನು ಸ್ವಯಂ ಸಹ ತಿನ್ನುತ್ತೀರಿ ಹಾಗೂ ಬಾಪ್‌ದಾದಾರವರಿಗೂ ಸಹ ಸ್ವೀಕಾರ ಮಾಡಿಸುತ್ತೀರಿ. ಮನೆಯಲ್ಲಿ ಮಾಡಿರಿ, ಮಾಡದಿರಿ. ಆದರೆ ಗುರುವಾರವಂತು ಸಿಹಿ ಸಿಗುತ್ತದೆ ಅಲ್ಲವೇ. ಹಾಗೂ ಖುಷಿಯ ಉತ್ಸವ ಇರುತ್ತದೆ ಎಂದು ತಿಳಿದರೆ ಬಾಯನ್ನೇ ಸಿಹಿಯಾಗಿಸುತ್ತೀರಿ. ಸಿಹಿಯಾದ ಬಾಯಿ ಅರ್ಥಾತ್ ಸಿಹಿಯಾದ ಮುಖ, ಬಾಯಿಯನ್ನಂತೂ ಎಲ್ಲರೂ ಸಿಹಿ ಮಾಡುತ್ತಾರೆ. ಆದರೆ ನಿಮ್ಮೆಲ್ಲರ ಬಾಯಿಯೂ ಸಿಹಿ ಹಾಗೂ ಮುಖವೂ ಸಿಹಿಯಾಗಿದೆ, ಅಥವಾ ಸ್ವಲ್ಪ ಸ್ವಲ್ಪ ಕಹಿಯಾಗಿಯೂ ಇದೆಯೇ? ಒಂದುವೇಳೆ ಒಂದು ಕಹಿಯ ರೇಖೆ ಇದ್ದರೂ ಇಂದು ವರ್ಷಕ್ಕೆ ಬೀಳ್ಕೊಡುಗೆ ಕೊಡುವ ಜೊತೆ-ಜೊತೆಗೆ ಈ ಕಹಿತನಕ್ಕೂ ಬೀಳ್ಕೊಡುಗೆಯನ್ನು ಕೊಟ್ಟುಬಿಡಿ. ಬೀಳ್ಕೊಡುಗೆ ಕೊಡುವುದು ಬರುತ್ತದೆಯೇ ಅಥವಾ ಜೊತೆಯಲ್ಲಿ ಇಟ್ಟುಕೊಳ್ಳುವುದು ಚೆನ್ನಾಗಿ ಬರುತ್ತದೆಯೇ? ಅಥವಾ ಬೀಳ್ಕೊಡುಗೆ ಕೊಟ್ಟು ನಂತರ ಮತ್ತೆ ಜೊತೆಯಲ್ಲಿಟ್ಟುಕೊಳ್ಳುತ್ತೀರಾ? ನಂತರ ಹೇಳುವಿರಿ ನಾವಂತೂ ಬಿಡಲು ಬಯಸುತ್ತೇವೆ ಆದರೆ ಮಾಯೆ ಬಿಡುತ್ತಿಲ್ಲ! ಹೀಗಂತೂ ಹೇಳುವುದಿಲ್ಲವಲ್ಲವೇ? ನಾವಂತೂ ಬಿಟ್ಟುಬಿಟ್ಟೆವು ಆದರೆ ಮಾಯೆ ಬಂದುಬಿಟ್ಟಿತು? ಮನೆಗೆ ಹೋಗಿ ಮತ್ತೆ ಈ ರೀತಿ ಪತ್ರ ಬರೆಯುತ್ತೀರೇ? ಬೀಳ್ಕೊಡುಗೆ. ಎಂದರೆ ಸದಾ ಕಾಲಕ್ಕಾಗಿ ಬೀಳ್ಕೊಡುಗೆ, ಬಿಳ್ಕೊಡುಗೆ ಕೊಡುವ ಅರ್ಥವೇ ಆಗಿದೆ ಮತ್ತೆ ಎಂದಿಗೂ ಬರಲು ಬಿಡುವುದಿಲ್ಲ ಎಂದು. ಕೆಲವೊಮ್ಮೆ ಬಂದು ಬಿಟ್ಟರೆ ಯಾವುದೇ ತೊಂದರೆ ಇಲ್ಲ ಎನ್ನುತ್ತಿದ್ದೀರಾ? ಏಕೆಂದರೆ ಹಳೆಯ ಸಂಸ್ಕಾರ ಬಹಳ ಜನರಿಗೆ ಚೆನ್ನಾಗಿ ಅನಿಸುತ್ತದೆ. ಇಂದು ಹೇಳುವಿರಿ ನಾಳೆಯಿಂದ ಹೀಗಾಗುವುದಿಲ್ಲ ಹಾಗೂ ಮತ್ತೆ ನಾಡಿದ್ದು ಪರವಶರಾಗಿ ಬಿಡುತ್ತೀರಿ. ಇದಕ್ಕೆ ಬೀಳ್ಕೊಡುಗೆ ಎಂದು ಹೇಳಲಾಗುವುದಿಲ್ಲ. ಎಂದ ಮೇಲೆ ಬೀಳ್ಕೊಡುಗೆ ಕೊಡುವುದನ್ನು ಸಹ ಕಲಿಯಿರಿ. ವರ್ಷಕ್ಕೆ ಬೀಳ್ಕೊಡುಗೆ ಕೊಡುವುದಂತೂ ಸಾಮಾನ್ಯ ಮಾತಾಗಿದೆ ಆದರೆ ನಿಮ್ಮೆಲ್ಲರಿಗೆ ಅಂಶ ಸಹಿತ ಮಾಯೆಯ ಬೀಳ್ಕೊಡುಗೆ ಕೊಡಬೇಕಾಗಿದೆ. ಅಂಶ ಮಾತ್ರವೂ ಉಳಿಯದಿರಲಿ, ಕೆಲವು ಮಕ್ಕಳು ಹೇಳುತ್ತಾರೆ 75% ಅಂತೂ ವ್ಯತ್ಯಾಸ ಬಂದುಬಿಟ್ಟಿದೆ ಉಳಿದದ್ದು ಸಹ ಬಂದುಬಿಡುತ್ತದೆ. ಆದರೆ ಮಾಯೆಯು ಅಂಶದಿಂದ ವಂಶವನ್ನು ಬಹಳ ಬೇಗ ಬೆಳೆಸಿಬಿಡುತ್ತದೆ. 25%

ಅಂಶ ಮಾತ್ರವೂ ಉಳಿದುಕೊಂಡು ಬಿಟ್ಟರೆ 25 ರಿಂದ 50 ರವರೆಗೆ ಬಹಳ ಬೇಗ ತಲುಪಿ ಬಿಡುವುದು. ಆದ್ದರಿಂದ ಅಂಶ ಸಹಿತ ಸಮಾಪ್ತಿ ಮಾಡಬೇಕಾಗಿದೆ. ಎಂದ ಮೇಲೆ ಹೊಸ ವರ್ಷದಲ್ಲಿ ಏನು ಮಾಡುವಿರಿ? ಹಳೆಯ ವರ್ಷಕ್ಕೆ ಬೀಳ್ಕೊಡುಗೆ ಕೊಡುವ ಜೊತೆ ಮಾಯೆಯ ಅಂಶಕ್ಕೂ ಸಹ ಬೀಳ್ಕೊಡುಗೆ ಕೊಡಿ. ಹಾಗೂ ಬೀಳ್ಕೊಡುಗೆಯ ಜೊತೆ ಶುಭಾಶಯಗಳು ಸಹ ಕೊಡುತ್ತೀರಲ್ಲವೇ! ನಾಳೆ ಯಾರನ್ನೇ ಭೇಟಿ ಮಾಡಿದರೆ ಹೊಸ ವರ್ಷದ ಶುಭಾಶಯಗಳು ಎಂದು ಹೇಳುತ್ತೀರಿ. ಎಂದ ಮೇಲೆ ಬೀಳ್ಕೊಡುಗೆ ಕೊಡಿ ಹಾಗೂ ಬೀಳ್ಕೊಡುಗೆಯ ಜೊತೆ ತಮಗೂ ಹಾಗೂ ಅನ್ಯರಿಗೂ ಸದಾ ಫರಿಶ್ತಾ ಸ್ವರೂಪದ ಶುಭಾಶಯಗಳನ್ನು ಕೊಡಿ. ಫರಿಶ್ತೆಯೇ ಆಗಿದ್ದೀರಿ. ಮೇಲಿಂದ ಕೆಳಗೆ ಬಂದಿರಿ, ನಿಮ್ಮ ಕಾರ್ಯವನ್ನು ಮಾಡಿದಿರಿ ಹಾಗೂ ಹಾರಿ ಹೋದಿರಿ. ಫರಿಶ್ತೆಯರು ಇದನ್ನೇ ಮಾಡುತ್ತಾರಲ್ಲವೇ! ಹಾರುವ ಕಲೆಯ ಚಿನ್ಹೆಯಾಗಿ ರೆಕ್ಕೆಯನ್ನು ತೋರಿಸಿದ್ದಾರೆ. ಯಾವುದೇ ಆರ್ಟಿಫಿಶಿಯಲ್(ನಕಲಿ) ರೆಕ್ಕೆ ಅಲ್ಲ ಆದರೆ ಫರಿಶ್ತೆಗೆ ಯಾವ ರೆಕ್ಕೆಯನ್ನು ತೋರಿಸುತ್ತಾರೆ ಅದರ ಅರ್ಥವಾಗಿದೆ ಫರಿಶ್ತೆ ಅರ್ಥಾತ್ ಹಾರುವ ಕಲೆಯವರು. ಎಂದ ಮೇಲೆ ಫರಿಶ್ತಾ ಸ್ವರೂಪದ ಶುಭಾಶಯ ಸ್ವಯಂಗೂ ಕೊಡಿ ಹಾಗೂ ಅನ್ಯರಿಗೂ ಕೊಡಿ. ಸದಾ ಫರಿಶ್ತಾ ಸ್ವರೂಪದ ಸ್ಮೃತಿಯಲ್ಲಿಯೂ ಇರಿ ಹಾಗೂ ಅನ್ಯರನ್ನು ಅದೇ ಸ್ವರೂಪದಲ್ಲಿ ನೋಡಿ. ಇವರು ಇಂತಹವರಾಗಿದ್ದಾರೆ ಹೀಗಿದ್ದಾರೆ....ಎಂದು ಅಲ್ಲ. ಫರಿಶ್ತೆಯಾಗಿದ್ದಾರೆ. ಈ ಫರಿಶ್ತೆ ಸಂದೇಶ ಕೊಡುವ ನಿಮಿತ್ತ ವಾಗಿದೆ. ತಿಳಿಯಿತೆ? ಎಲ್ಲರಿಗೂ ಫರಿಶ್ತಾ ಸ್ವರೂಪದ ಶುಭಾಶಯಗಳನ್ನು ಕೊಡಿ. ಭಲೇ ಯಾರೇ ಹೇಗೆ ಇರಲಿ, ಆದರೆ ದೃಷ್ಟಿಯಿಂದ ಸೃಷ್ಟಿ ಬದಲಾಗಬಲ್ಲದು. ಯಾವಾಗ ದೃಷ್ಟಿಯಿಂದ ಸೃಷ್ಟಿ ಬದಲಾವಣೆ ಆಗಬಲ್ಲದೋ ಆಗ ಬ್ರಾಹ್ಮಣರು ಬದಲಾಗಲು ಸಾಧ್ಯವಿಲ್ಲವೇ? ನಿಮ್ಮ ದೃಷ್ಟಿ ಸ್ಮೃತಿ ಪ್ರತಿಯೊಬ್ಬ ಆತ್ಮನನ್ನು ಬದಲಾಯಿಸಿ ಬಿಡುತ್ತದೆ.

ಬಾಪ್‌ದಾದಾರವರಿಗೆ ಕೆಲವೊಮ್ಮೆ ಮಕ್ಕಳನ್ನು ನೋಡಿದಾಗ ನಗು ಬರುತ್ತದೆ. ನಿಮಗೂ ಸಹ ನಿಮ್ಮನ್ನು ನೋಡಿಕೊಂಡಾಗ ನಗು ಬರುತ್ತದೆಯೇ? ಒಂದು ಕಡೆ ಹೇಳುತ್ತೀರಿ ನಾವು ವಿಶ್ವ ಪರಿವರ್ತಕರಾಗಿದ್ದೇವೆ, ವಿಶ್ವಕಲ್ಯಾಣಕಾರಿಯಾಗಿದ್ದೇವೆ ಎಂದು ವಿಶ್ವ ಪರಿವರ್ತಕರು ಹೇಳುತ್ತಾರೆ. ಎಲ್ಲರೂ ವಿಶ್ವ ಪರಿವರ್ತಕರೇ ಆಗಿದ್ದೀರಾ ಅಥವಾ ಕೆಲವರಾಗಿದ್ದೀರಾ ನಾವು ವಿಶ್ವಕಲ್ಯಾಣಕಾರಿಗಳು ವಿಶ್ವ ಪರಿವರ್ತಕರು ಎಂದು ಭಾವಿಸುವವರು ಕೈಯನ್ನು ಎತ್ತಿ. ಆಲೋಚನೆ ಮಾಡಿ ಎತ್ತಬಾರದು ಸಾಮಾನ್ಯವಾಗಿ ಎತ್ತಿರಿ. ನೀವೆಲ್ಲರೂ ವಿಶ್ವ ಪರಿವರ್ತಕರಾಗಿದ್ದೀರಾ? ಈಗ ಪಕ್ಕಾ ಆಗಬೇಕು ಕೈಯನ್ನೆತ್ತಿ ಬಿಟ್ಟಿದ್ದೀರಿ. ಟಿವಿಯಲ್ಲಿ ನಿಮ್ಮ ಕೈಗಳೆಲ್ಲವೂ ಕಾಣಿಸುತ್ತಿವೆ. ಎಲ್ಲರ ಕೈಗಳು ಟಿವಿಯಲ್ಲಿ ಬಂದುಬಿಟ್ಟಿವೆ. ನಿಮ್ಮೆಲ್ಲರ ಸ್ಮೃತಿ ಚಿಹ್ನೆ ಉಳಿದುಕೊಂಡು ಬಿಟ್ಟಿದೆ. ಅಂತಹ ವಿಶ್ವ ಪರಿವರ್ತಕರು ಬಂದು ಇದು ನನ್ನಿಂದ ಬದಲಾಗುತ್ತಿಲ್ಲ ಎಂದು ಹೇಳಿದರೆ ಆ ಸಮಯದಲ್ಲಿ ನೀವು ಯಾರು? ತನ್ನ ಪ್ರತಿಯು ಸಹ ಕೆಲವು ಬಾರಿ ಆತ್ಮಿಕ ವಾರ್ತಾಲಾಪದಲ್ಲಿ ಹೇಳುತ್ತಾರೆ- ಬಯಸುತ್ತೇವೆ ಇದು ಆಗಬಾರದು ಎಂದು. ಆದರೂ ಸಹ ಆಗಿಬಿಡುವುದು..... ಎಂದ ಮೇಲೆ ವಿಶ್ವ ಪರಿವರ್ತಕರು ಹಾಗೂ ಸ್ವಯಂಗಾಗಿಯೇ ಹೇಳುತ್ತೀರಿ ನಾನು ಬಯಸುತ್ತೇನೆ' ಆದರೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದರೆ ನಿಮ್ಮ ಟೈಟಲ್ ಏನಾಗಿರಬೇಕು? ಅವರಿಗೆ ವಿಶ್ವ ಪರಿವರ್ತಕ ಎಂದು ಹೇಳಬೇಕೇ ಅಥವಾ ಬಲಹೀನರು ಎಂದು ಹೇಳಬೇಕೇ? ಗೀತೆಯನ್ನು ಹಾಡುತ್ತೀರಲ್ಲವೇ ಏನು ಮಾಡುವುದು, ಹೇಗೆ ಮಾಡುವುದು, ಗೊತ್ತಿಲ್ಲ

ಯಾವಾಗ ಆಗುವುದು. ಈ ಗೀತೆಯನ್ನು ಬಾಪ್ ದಾದಾರವರು ಕೇಳಿಸಿಕೊಳ್ಳುತ್ತಾರಲ್ಲವೇ? ಯಾವಾಗ ವಿಶ್ವ ಪರಿವರ್ತಕ ರಾಗಿದ್ದೀರಿ, ವಿಶ್ವಕಲ್ಯಾಣಕಾರಿಯಾಗಿದ್ದೀರಿ ಎಂದ ಮೇಲೆ ಯಾವ ಆತ್ಮನನ್ನಾದರೂ ಪರಿವರ್ತನೆ ಮಾಡಲು ಸಾಧ್ಯವಾಗುವುದಿಲ್ಲವೇ? ಸ್ವಯಂ ಅನ್ನು ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ಒಂದು ವೇಳೆ ಸ್ವಪರಿವರ್ತನೆಯೇ ಆಗುತ್ತಿಲ್ಲ ಎಂದರೆ ವಿಶ್ವಪರಿವರ್ತನೆ ಹೇಗೆ ಮಾಡುವಿರಿ?

ಬಾಪ್‌ದಾದಾರವರು ಹೇಳುತ್ತಾರೆ ಈ ವರ್ಷದ ವಿಶೇಷ ದೃಢ ಪ್ರತಿಜ್ಞೆಯನ್ನು ಸ್ವಯಂನೊಂದಿಗೆ ಮಾಡಿರಿ. ಪ್ರತಿಜ್ಞೆಯ ಅರ್ಥವೇ ಆಗಿದೆ- ಶರೀರ ಹೋಗಲಿ ಆದರೆ ಯಾವ ಪ್ರತಿಜ್ಞೆಯನ್ನು ಮಾಡಿದ್ದೀರೋ ಅದು ಹೋಗದಿರಲಿ ಎಂದಮೇಲೆ ಪ್ರತಿಜ್ಞೆ ಮಾಡುವ ಧೈರ್ಯವಿದೆಯೇ? ಹೇಳುತ್ತೀರಾ? ಭಯಪಡುವುದಿಲ್ಲವೇ? ಹಾಗಾದರೆ ಇದೇ ಪ್ರತಿಜ್ಞೆ ಸ್ವಯಂನೊಂದಿಗೆ ಮಾಡಿಕೊಳ್ಳಿ" ಎಂದೂ ಕೂಡ ಯಾರ ಬಲಹೀನತೆ ಅಥವಾ ಲೋಪವನ್ನು ನೋಡುವುದಿಲ್ಲ, ಕೇಳುವುದಿಲ್ಲ, ಮಾತನಾಡುವುದಿಲ್ಲ ಎಂದು ಪ್ರತೀಜ್ಞೆ ಮಾಡಬಲ್ಲಿರಾ? ಕೇಳುವುದಿಲ್ಲ ಮಾತನಾಡುವುದಿಲ್ಲ ನೋಡುವುದಿಲ್ಲ ಆಗ ಈ ವರ್ಷ ಏನಾಗುತ್ತದೆ? ಶುಭ ಭಾವನಾ ಗುಣಸ್ವರೂಪ ವರ್ಷವಾಗಿ ಬಿಡುತ್ತದೆ. ಪ್ರತಿ ವರ್ಷವು ತಮ್ಮ ತಮ್ಮ ಹೆಸರನ್ನು ಕೊಡುತ್ತಿರಲ್ಲವೇ. ಯಾವಾಗ ಈ ಪ್ರತಿಜ್ಞೆ ಎಲ್ಲರು ಮಾಡುತ್ತೀರೋ ಆಗ ಈ ವರ್ಷವು ಶುಭಭಾವನಾ ಗುಣಸ್ವರೂಪ ವರ್ಷವಾಗುತ್ತದೆ ಒಪ್ಪಿಗೆ ಇದೆಯೇ? ಅಲ್ಲಿಗೆ ಹೋಗಿ ನಂತರ ಬದಲಾಗಬಾರದು! ನಂತರ ಹೀಗೆ ಹೇಳಬಾರದು ಮಧುಬನದಲ್ಲಂತೂ ವಾಯುಮಂಡಲ ಚೆನ್ನಾಗಿತ್ತಲ್ಲವೇ ಆದರೆ ಇಲ್ಲಿ ವಾಯುಮಂಡಲದ ಸಂಗ ಇದೆಯಲ್ಲವೇ! ಎಂದು, ಏಕೆಂದರೆ ಪರಿವರ್ತಕರು ಯಾರದೇ ಸಂಘದಲ್ಲಿ ಬರುವುದಿಲ್ಲ. ಯಾರದೇ ಪ್ರಭಾವದಲ್ಲಿ ಬರುವುದಿಲ್ಲ ಒಂದು ವೇಳೆ ಪರಿವರ್ತಕರೇ ಪ್ರಭಾವದಲ್ಲಿ ಬಂದು ಬಿಟ್ಟರೆ ಪರಿವರ್ತನೆ ಹೇಗೆ ಮಾಡುತ್ತಾರೆ ಆದ್ದರಿಂದ ಈ ವರ್ಷವನ್ನು ಗುಣಮೂರ್ತಿ ಮತ್ತು ಶುಭಭಾವನಾ ವರ್ಷದ ರೂಪದಲ್ಲಿ ಆಚರಿಸಿ. ಯಾರದೇ ಅಶುಭ ಮಾತನ್ನು ಸಹ ನೀವು ಶುಭವನ್ನಾಗಿ ಮಾಡಿ ಗ್ರಹಿಸಿ, ಅಶುಭವನ್ನು ನೋಡುತ್ತಲೂ ಸಹ ನೀವು ಶುಭ ದೃಷ್ಟಿಯಿಂದ ನೋಡಿ, ಪ್ರಕೃತಿಯನ್ನು ಬದಲಾವಣೆ ಮಾಡಬಲ್ಲಿರಿ ಎಂದ ಮೇಲೆ ಮನುಷ್ಯ ಆತ್ಮರನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲವೇ? ಹಾಗೂ ಅದರಲ್ಲಿಯೂ ಬ್ರಾಹ್ಮಣ ಆತ್ಮರನ್ನು ಬದಲಾವಣೆ ಮಾಡಲು ಆಗುತ್ತಿಲ್ಲವೇ? ಯಾವಾಗ ಎಲ್ಲರ ಪ್ರತಿ ಶುಭ ಭಾವನೆ ಇರುತ್ತದೆಯೋ ಆಗ 'ಕಾರಣ' ಶಬ್ದ ಸಮಾಪ್ತಿಯಾಗಿ 'ನಿವಾರಣೆ' ಶಬ್ದವೇ ಕಾಣಿಸಿಕೊಳ್ಳುತ್ತದೆ. ಇದರ ಕಾರಣ ಹೀಗಾಯಿತು ಅದರ ಕಾರಣ ಹೀಗಾಯಿತು ಎಂದು ಹೇಳಬಾರದು. ಕಾರಣವನ್ನು ನಿವಾರಣೆಯಾಗಿ ಪರಿವರ್ತನೆ ಮಾಡಿ ಧೈರ್ಯವಿದೆಯೇ? ಒಳ್ಳೆಯದು! ಬಾಪ್‌ದಾದಾರವರು  ಟಿವಿಯನ್ನು ನೋಡಿದಾಗ ಬಹಳ ಮಜಾ ಬರುತ್ತದೆ. ಈ ಕಲಿಯುಗದ ಟಿವಿಯನ್ನು ನೋಡುವುದಿಲ್ಲ ಬ್ರಾಹ್ಮಣರ ಟಿವಿಯನ್ನು ನೋಡುತ್ತಾರೆ. ಹಾಗೆಂದು ನೀವೂ ಟಿವಿಯನ್ನು ನೋಡಲು ಶುರು ಮಾಡಬೇಡಿರಿ. ಮಕ್ಕಳ ಆಟವನ್ನು ನೋಡಿದಾಗ ಬಹಳ ಮಜಾ ಬರುತ್ತದೆಯಲ್ಲವೇ. ಮಿಕ್ಕಿ ಮೌಸ್ ನ ಆಟವನ್ನು ಆಡುತ್ತೀರಲ್ಲವೇ! ಸ್ವಲ್ಪ ಸಮಯಕ್ಕಾಗಿ ಕೆಲವರು ಸಿಂಹವಾಗಿ ಬಿಡುತ್ತೀರಿ. ಕೆಲವರು ಶ್ವಾನವಾಗಿ ಬಿಡುತ್ತೀರಿ. ಯಾವ ಸಮಯದಲ್ಲಿ ಕ್ರೋದ ಮಾಡುತ್ತೀರೋ ಆ ಸಮಯದಲ್ಲಿ ಏನಾಗಿರುತ್ತೀರಿ? ಯಾವ ಸಮಯ ಯಾರೊಂದಿಗಾದರೂ ಚರ್ಚೆ ಮಾಡುವಾಗ ಅವರ ಮೇಲೆ ದಾಳಿ ಮಾಡುತ್ತಿರುತ್ತೀರಿ. ಸಿದ್ದ ಮಾಡುತ್ತಿರುತ್ತೀರಿ ಆ

ಸಮಯದಲ್ಲಿ ಏನಾಗಿರುತ್ತಿರಿ? ಮಿಕ್ಕಿ ಮೌಸ್ ಆಗಿ ಬಿಡುತ್ತೀರಲ್ಲವೇ ಎಂದ ಮೇಲೆ ಈ ವರ್ಷ ಮಿಕ್ಕಿ ಮೌಸ್ ಆಗಬೇಡಿ, ಫರಿಶ್ತೆಗಳಾಗಿರಿ. ಮಿಕ್ಕಿ ಮೌಸ್ ನ ಆಟ ಬಹಳ ಆಡಿದ್ದಾಯಿತು ಈ ವರ್ಷ ಇಷ್ಟು ಶಕ್ತಿಶಾಲಿ ವರ್ಷವನ್ನಾಗಿ ಆಚರಿಸಿ, ಏಕೆಂದರೆ ಸಮಯವಂತೂ ಸಮೀಪ ಬರಬೇಕು ಹಾಗೂ ತರಬೇಕಾಗಿದೆ. ಡ್ರಾಮಾನುಸಾರ ಸಮೀಪ ಬರಲೇಬೇಕು ಆದರೆ ತರುವಂತಹವರು ಯಾರಾಗಿದ್ದಾರೆ? ನೀವೇ ಆಗಿದ್ದೀರಲ್ಲವೇ?

ಎರಡನೆಯ ವಿಶೇಷತೆ ಈ ವರ್ಷದಲ್ಲಿ ಏನು ಮಾಡುವಿರಿ? ಹೊಸ ವರ್ಷದಲ್ಲಿ ಒಂದಂತೂ ಶುಭಾಶಯಗಳು ಎರಡನೆಯದಾಗಿ ಉಡುಗೊರೆಯನ್ನು ಕೊಡುತ್ತಾರೆ. ಯಾರೇ ಸಂಬಂಧ ಸಂಪರ್ಕದಲ್ಲಿ ಬರಲಿ. ಭಲೆ ಬ್ರಾಹ್ಮಣ ಪರಿವಾರ, ಅಥವಾ ಅನ್ಯ ಆತ್ಮರಾಗಿರಲಿ, ಅವರೆಲ್ಲರಿಗೂ ಮೊದಲನೆಯದಾಗಿ ಮಧುರ ಮಾತುಗಳ ಗಿಫ಼್ಟನ್ನು (ಉಡುಗೊರೆ) ಕೊಡಿ. ಸ್ನೇಹದ ಮಾತುಗಳ ಉಡುಗೊರೆಯನ್ನು ಕೊಡಿ ಹಾಗೂ ಎರಡನೆಯದಾಗಿ ಸದಾ ಯಾವುದಾದರೂ ಒಂದು ಗುಣದ, ಶಕ್ತಿಯ ಉಡುಗೊರೆಯನ್ನು ಕೊಡಿ. ಈ ಉಡುಗೊರೆಯನ್ನು ಸೆಕೆಂಡಿನಲ್ಲಿ ಕೊಡಬಹುದು ಸಮಯವೇ ಸಿಕ್ಕಿಲ್ಲ, ತೆಗೆದುಕೊಳ್ಳುವವರೆಗೂ ಸಮಯವಿರಲಿಲ್ಲ ಕೊಡುವವರಿಗೂ ಸಮಯವಿರಲಿಲ್ಲ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಒಂದು ವೇಳೆ ನಿಮ್ಮ ಶ್ರೇಷ್ಠ ಭಾವನೆ, ಶ್ರೇಷ್ಠ ಕಾಮನೆಯ ವೃತ್ತಿ ಇದ್ದರೆ ಸೆಕೆಂಡಿನ ಸಂಕಲ್ಪದಿಂದ, ದೃಷ್ಟಿಯಿಂದ ತಮ್ಮ ಹೃದಯದ ಮುಗುಳ್ನಗೆಯಿಂದ ಸೆಕೆಂಡಿನಲ್ಲಿಯೂ ಸಹ ಯಾರಿಗೇ ಆಗಲಿ ಬಹಳಷ್ಟು ಕೊಡಬಹುದು ಯಾರೇ ಬರಲಿ ಅವರಿಗೆ ಉಡುಗೊರೆಯನ್ನು ಕೊಡಬೇಕು. ಖಾಲಿ ಕೈಯಲ್ಲಿ ಹೋಗದಿರಲಿ ಎನ್ನುತ್ತೀರಲ್ಲವೇ. ಇಷ್ಟೂ ಗಿಫ್ಟ್ ನಿಮ್ಮ ಬಳಿ ಇದೆಯೇ? ಅಥವಾ ಎರಡು ದಿನ ಕೊಟ್ಟರೆ ಉಡುಗೊರೆ ಖಾಲಿಯಾಗಿ ಬಿಡುತ್ತದೆಯೇ? ಎಲ್ಲರ ಸ್ಟಾಕ್(ಸಂಗ್ರಹ) ಭರ್ಪೂರ್ (ಸಂಪನ್ನ) ಆಗಿದೆಯಲ್ಲವೇ? ಅಥವಾ ಕೆಲವರ ಸ್ಟಾಕ್ ಸ್ವಲ್ಪ ಕಡಿಮೆಯಾಗಿಬಿಟ್ಟಿದೆಯೇ? ಯಾರ ಬಳಿ ಕಡಿಮೆ ಇದೆಯೋ ಅವರು ಕೈ ಎತ್ತಿ ತುಂಬಿ ಬಿಡುತ್ತೇವೆ. ಯಾರ ಬಳಿ ಕಡಿಮೆ ಇದೆಯೋ ಅವರು ಚೀಟಿಯನ್ನು ಬರೆದು ಜನಕ್( ದಾದಿ ಜಾನಕಿ) ಯವರ ಬಳಿ ಕೊಡಿ ಅವರು ಕ್ಲಾಸ್ ಮಾಡುತ್ತಾರೆ. ಕಡಿಮೆ ಇರಬಾರದು ಅಲ್ಲವೇ! ದಾತನ ಮಕ್ಕಳು ಹಾಗೂ ಕಡಿಮೆ ಇದೆ ಎಂದರೆ ಒಳ್ಳೆಯದು ಎನಿಸುವುದಿಲ್ಲ ಅಲ್ಲವೇ! ಆದ್ದರಿಂದ ತುಂಬಿಸಿಕೊಂಡು ಹೋಗಿ ಭರ್ಪೂರ್ ಆಗಿ ಹೋಗಿ. ಬಲಹೀನತೆಯನ್ನು ತೆಗೆದುಕೊಂಡು ಹೋಗಬೇಡಿ. ವರ್ಷದ ಜೊತೆಗೆ ಬಲಹೀನತೆಗಳಿಗೂ ಬೀಳ್ಕೊಡುಗೆಯನ್ನು ಕೊಟ್ಟು ಹೋಗಿ, ನಾಳೆ ಒಂದೇ ದಿನ ಉಡುಗೊರೆಯನ್ನು ಕೊಡಬೇಕು ಎಂದಿಲ್ಲ. ಇಡೀ ವರ್ಷ ಎಲ್ಲರಿಗೂ ಗಿಫ್ಟ್ ಹಂಚುತ್ತಾ ಹೋಗಿರಿ ಉಡುಗೊರೆಯನ್ನು ಪಡೆದುಕೊಳ್ಳದೇ ಯಾರೂ ಸಹ ಹೋಗದಿರಲಿ, ಎಂದ ಮೇಲೆ ಎಷ್ಟು ಒಳ್ಳೆಯದೆನಿಸುತ್ತದೆ. ಒಂದು ವೇಳೆ ಯಾರಾದರೂ ಬರುತ್ತಾರೆ ಎಂದರೆ ಅವರಿಗೆ ಪ್ರೀತಿಯಿಂದ ಚಿಕ್ಕದಾದ ಗಿಫ಼್ಟನ್ನು ಕೊಟ್ಟರೆ ಎಷ್ಟು ಖುಷಿ ಪಡುತ್ತಾರೆ. ವಸ್ತುವನ್ನು ನೋಡುವುದಿಲ್ಲ ಆದರೆ ಉಡುಗೊರೆ ಅರ್ಥಾತ್ ಸ್ನೇಹದ ಸ್ವರೂಪವನ್ನು ನೋಡುತ್ತಾರೆ. ಉಡುಗೊರೆಯಿಂದ ಯಾರು ಸಹ ಮಾಲಾಮಾಲ್ ಆಗುವುದಿಲ್ಲ ಆದರೆ ಸ್ನೇಹದಿಂದ ಮಾಲಾಮಾಲ್ ಆಗುತ್ತಾರೆ. ಎಂದ ಮೇಲೆ ಸ್ನೇಹ ಕೊಡುವುದು ಹಾಗೂ ಸ್ನೇಹ ಪಡೆಯುವುದು. ಒಂದು ವೇಳೆ ಯಾರಾದರೂ ನಿಮಗೆ ಸ್ನೇಹ ಕೊಡುವುದಿಲ್ಲ ಎಂದರೂ ಸಹ ನೀವು ಅವರಿಂದ ಸ್ನೇಹವನ್ನು ತೆಗೆದುಕೊಳ್ಳಿ. ತೆಗೆದುಕೊಳ್ಳುವುದು ಬರುತ್ತದೆಯೇ ಅಥವಾ ಮುಜುಗರ ಎನಿಸುತ್ತದೆಯೇ- ಹೇಗೆ ತೆಗೆದುಕೊಳ್ಳುವುದು? ಇದನ್ನು ತೆಗೆದುಕೊಳ್ಳುವುದರಲ್ಲಿ ಯಾವುದೇ ತೊಂದರೆ ಇಲ್ಲ. ಅವರು

ನಿಮ್ಮ ಮೇಲೆ ಕ್ರೋಧ ಮಾಡಿದರೂ ಸಹ ನೀವು ಸ್ನೇಹದ ರೂಪದಲ್ಲಿ ತೆಗೆದುಕೊಳ್ಳಿ. ನೀವು ವಿಶ್ವ ಪರಿವರ್ತಕರಾಗಿದ್ದೀರಲ್ಲವೇ. ಎಂದ ಮೇಲೆ ವಿಶ್ವ ಪರಿವರ್ತಕರು ಯಾರದೇ ನೆಗೆಟಿವ್ (ನಕಾರಾತ್ಮಕತೆ) ಅನ್ನು ಪಾಸಿಟಿವ್ ನಲ್ಲಿ (ಸಕಾರಾತ್ಮಕತೆಯಲ್ಲಿ) ಬದಲಿಸಲು ಸಾಧ್ಯವಿಲ್ಲವೇ! ಆದ್ದರಿಂದ ಈ ವರ್ಷ ಸದಾ ಸ್ನೇಹ ಕೊಡುವುದು ಹಾಗೂ ಸ್ನೇಹ ಪಡೆಯುವುದು. ನಂತರ ಹೀಗೆ ಹೇಳಬೇಡಿ- ಇವರು ನನಗೆ ಸ್ನೇಹ ಕೊಡಲೇ ಇಲ್ಲ. ನಾನು ಏನು ಮಾಡಲಿ. ಅವರು ಕೊಡಲೀ ಬಿಡಲಿ, ನೀವು ತೆಗೆದುಕೊಳ್ಳಿ, ಏನನ್ನಾದರೂ ಕೊಡುತ್ತಾರಲ್ಲವೇ, ನೆಗೆಟಿವ್ ಕೊಡಲಿ ಅಥವಾ ಪಾಸಿಟಿವ್ ಕೊಡಲಿ ಏನನ್ನಾದರೂ ಕೊಡುತ್ತಾರಲ್ಲವೇ! ಆದರೆ ವಿಶ್ವ ಪರಿವರ್ತಕರಾಗಿರುವ ನೀವು ನೆಗೆಟಿವ್ ಅನ್ನು ಪಾಸಿಟಿವ್ ನಲ್ಲಿ ಪರಿವರ್ತನೆ ಮಾಡಿಬಿಡಿ ತಿಳಿಯಿತೇ ಈ ವರ್ಷ ಏನು ಮಾಡಬೇಕು ಎಂದು! ಒಳ್ಳೆಯದು ಡಬಲ್ ವಿದೇಶಿಯರು ಏನು ಮಾಡುವಿರಿ? ದಾತ ಆಗಿಬಿಟ್ಟಿರುವಿರೇ? ವಾಹ್, ದಾತಾತನದ ಶುಭಾಶಯಗಳು.

ಬಾಪ್‌ದಾದಾರವರು ಪ್ರತಿದಿನ ಮಕ್ಕಳ ಒಂದು ಮಾತನ್ನು ನೋಡುತ್ತಾರೆ. ಅದು ಯಾವುದಾಗಿದೆ? 'ನಾನು' ಹಾಗೂ 'ನನ್ನದು' ಇದೇ ತೊಂದರೆ ಮಾಡುತ್ತದೆ. ಕೆಲವೊಮ್ಮೆ 'ನನ್ನದು' ಬಂದುಬಿಡುತ್ತದೆ, ಕೆಲವೊಮ್ಮೆ 'ನಾನು' ಬಂದುಬಿಡುತ್ತದೆ. ಇದೇ ಮಧ್ಯ-ಮಧ್ಯದಲ್ಲಿ ತೊಂದರೆ ಮಾಡುತ್ತಿರುತ್ತದೆ. ವರ್ಷ ಪರಿವರ್ತನೆ ಯಾಗುತ್ತಿದೆ ಎಂದ ಮೇಲೆ ಈ 'ನಾನು' ಹಾಗೂ 'ನನ್ನದು' ಇದನ್ನು ಸಹ ಪರಿವರ್ತನೆ ಮಾಡಿ. ಶಬ್ಧ ಭಲೇ 'ನಾನು' ಎಂದು ಹೇಳಿ ಆದರೆ ನಾನು ಯಾರು? ಒರಿಜಿನಲ್ ( ನಿಜವಾದ) 'ನಾನು' ಎಂದು ಯಾರಿಗೆ ಹೇಳಲಾಗುತ್ತದೆ ? ಶರೀರಕ್ಕೋ ಅಥವಾ ಆತ್ಮಕ್ಕೋ? ನಾನು ಆತ್ಮನಾಗಿದ್ದೇನೆ. ಎಂದ ಮೇಲೆ 'ನಾನು' ಶಬ್ಧವನ್ನು ಉಪಯೋಗಿಸುವಾಗ 'ನಾನು' ಶಬ್ಧದ ಒರಿಜಿನಲ್ ಸ್ವರೂಪ, ಒರಿಜಿನಲ್ ಅರ್ಥವನ್ನೇಕೆ ಸ್ಮೃತಿಯಲ್ಲಿ ಇಡಬಾರದು. ಇಡೀ ದಿನದಲ್ಲಿ ಎಷ್ಟು ಬಾರಿ 'ನಾನು' ಎಂಬ ಶಬ್ಧವನ್ನು ಬಳಸುತ್ತೀರಿ? ಬಳಸಲೇಬೇಕಾಗುತ್ತದೆ ಅಲ್ಲವೇ. 'ನನ್ನದು' ಶಬ್ದವನ್ನು ಸಹ ಹಲವು ಬಾರಿ ಬಳಸುತ್ತೀರಿ ಹಾಗೂ 'ನಾನು' ಶಬ್ಧವನ್ನು ಸಹ ಹಲವು ಬಾರಿ ಬಳಸುತ್ತೀರಿ. ಎಷ್ಟು ಬಾರಿ 'ನಾನು' ಶಬ್ದವನ್ನು ಬಳಸುತ್ತೀರೋ ಅಷ್ಟು ಬಾರಿ ಒಂದು ವೇಳೆ ವಾಸ್ತವಿಕ ಅರ್ಥದಲ್ಲಿ 'ನಾನು' ಎಂಬ ಸ್ಮೃತಿಯನ್ನು ತಂದುಕೊಂಡರೆ 'ನಾನು' ಶಬ್ದವು ಮೋಸ ಮಾಡುವುದೋ ಅಥವಾ ಮೇಲಕ್ಕೆ ಹಾರಿಸುವುದೋ? ಆದ್ದರಿಂದ ಯಾವಾಗ 'ನಾನು' ಎಂಬ ಶಬ್ಧವನ್ನು ಬಳಸುತ್ತೀರೋ ಆಗ ನಾನು ಆತ್ಮನಾಗಿದ್ದೇನೆ ಎಂದು ಯೋಚಿಸಿ. ಏಕೆಂದರೆ 'ನಾನು' ಹಾಗೂ 'ನನ್ನದು' ಶಬ್ದಗಳನ್ನು ಉಪಯೋಗಿಸದೇ ಇರಲು ಸಾಧ್ಯವಿಲ್ಲ. ಹೇಳಲೇ ಬೇಕಾಗುತ್ತದೆ ಹಾಗೂ ಅಭ್ಯಾಸವು ಆಗಿಬಿಟ್ಟಿದೆ. 'ನಾನು' 'ನನ್ನದು' ಇದರ ಪಕ್ಕಾ ಸಂಸ್ಕಾರವಾಗಿ ಬಿಟ್ಟಿದೆ. ಎಂದ ಮೇಲೆ ಯಾವ ಸಮಯ 'ನಾನು' ಶಬ್ದವನ್ನು ಬಳಸುತ್ತೀರೋ ಆ ಸಮಯ ಇದನ್ನೇ ಯೋಚಿಸಿ ನಾನು ಯಾರಾಗಿದ್ದೇನೆ? ನಾನು ಶರೀರವಂತೂ ಅಲ್ಲವೇ ಅಲ್ಲ. ಯಾವಾಗ ನಾನು ಶರೀರವಾಗಿದ್ದೇನೆ ಎಂದುಕೊಳ್ಳುತ್ತೇನೆಯೋ ಆಗಲೇ ದೇಹ ಅಭಿಮಾನ ಬರುತ್ತದೆ. ಶರೀರವನ್ನು ನನ್ನದು ಎನ್ನುತ್ತಿರಲ್ಲವೇ? ನಾನು ಶರೀರವಾಗಿದ್ದೇನೆ ಎಂದು ತಪ್ಪಾಗಿಯೂ ಹೇಳುವುದಿಲ್ಲವಲ್ಲವೇ? ಅಪ್ಪಿ-ತಪ್ಪಿಯು ಸಹ ನಾನು ಶರೀರವಾಗಿದ್ದೇನೆ ಎಂದು ಹೇಳುವುದಿಲ್ಲವಲ್ಲವೇ? ಎಂದ ಮೇಲೆ ನಾನು ಎಂಬ ಶಬ್ದವು ಇನ್ನಷ್ಟು ಸ್ಮೃತಿ ಹಾಗೂ ಸಮರ್ಥತೆಯನ್ನು ಕೊಡಿಸುವ ಶಬ್ಧವಾಗಿದೆ. ಬೀಳಿಸುವ ಶಬ್ದವಲ್ಲ. ಆದ್ದರಿಂದ ಪರಿವರ್ತನೆ ಮಾಡಿಕೊಳ್ಳಿರಿ ಪಕ್ಕಾ ವಿಶ್ವಪರಿವರ್ಶಕರು ಆಗಿದ್ದೀರಲ್ಲವೇ? ನೋಡಿ ಕಚ್ಚಾ

ಆಗಿರಬಾರದು. ನಾನು ಶಬ್ಧವನ್ನು ಸಹ ಪರಿವರ್ತನೆ ಮಾಡಿ ಯಾವಾಗ ನಾನು ಎಂಬ ಪದವನ್ನು ಉಚ್ಚರಿಸಿದರೆ, ಅದೇ ಸ್ವರೂಪದಲ್ಲಿ ಬಂದುಬಿಡಿ ಹಾಗೂ ಯಾವಾಗ 'ನನ್ನದು' ಎಂಬ ಶಬ್ಧವನ್ನು ಬಳಸುತ್ತೀರೋ ಆಗ ಎಲ್ಲದಕ್ಕಿಂತ ಮೊದಲು ನನ್ನವರು ಯಾರು? ತಂದೆಯೇ ಅಥವಾ ಇನ್ನೂ ಯಾರಾದರೂ  ಇದ್ದಾರೆಯೇ? ಯಾರು ಇಲ್ಲವೇ? ಇಡೀ ದಿನದಲ್ಲಿ ನನ್ನದು ನನ್ನದು ಎಂದು ಬಹಳಷ್ಟು ತಯಾರು ಮಾಡಿಕೊಳ್ಳುತ್ತೀರಿ! ನನ್ನ  ಸ್ವಭಾವ, ನನ್ನ ಸಂಸ್ಕಾರ, ನನ್ನ ಈ ವಸ್ತುಗಳು, ನನ್ನ ಪರಿವಾರ, ನನ್ನ ಸೆಂಟರ್, ನನ್ನ ವಿಧ್ಯಾರ್ಥಿ, ನನ್ನ ಸೇವೆ, ನನ್ನ ಸೇವೆಯನ್ನು ಇವರು ಏಕೆ ಮಾಡಿದರು? ಹೀಗೆ ಹೇಳುತ್ತೀರಲ್ಲವೇ? ಆಟವನ್ನು ಹೀಗೆ ಆಡುತ್ತೀರಲ್ಲವೇ ಯಾವಾಗ ನನ್ನದು ಎಂಬ ಶಬ್ಬವನ್ನು ಹೇಳುತ್ತೀರೋ ಆಗ ನನ್ನದು ಎಂದು ಹೇಳುವ ಮೊದಲೇ ಇದನ್ನು ನೆನಪು ಮಾಡಿಕೊಳ್ಳಿ ನನ್ನವರು ಯಾರು ಮೊದಲು 'ನನ್ನ ಬಾಬಾ' ಇದನ್ನು ನೆನಪು ಮಾಡಿ ನಂತರ ಬೇರೆ ಎಲ್ಲಾ ನನ್ನದನ್ನು ನೆನಪು ಮಾಡಿ ಎಲ್ಲಿ ತಂದೆ ಇರುತ್ತಾರೆಯೋ ಅಲ್ಲಿ ದೇಹಾಭಿಮಾನ ಅಥವಾ ಬೀಳುವ ಕಲೆ ಇರುವುದಿಲ್ಲ. ಹಾಗಾದರೆ 'ನಾನು' ಹಾಗೂ 'ನನ್ನದು' ಈ ಎರಡು ಶಬ್ದಗಳನ್ನು ಈ ವೃತ್ತಿಯಿಂದ, ಈ ದೃಷ್ಟಿಯಿಂದ ಇದೇ ಅರ್ಥದಿಂದ ನೋಡಿರಿ ಹಾಗೂ ಹೇಳಿರಿ. 'ನನ್ನದು' ಎಂಬ ಶಬ್ದ ಬಾಯಿಂದ ಬರುತ್ತಿದ್ದ ಹಾಗೆಯೇ ಮೊದಲು ನನ್ನ ತಂದೆ ಎಂಬ ಸ್ಮೃತಿ ಬರಬೇಕು ಆಗ ನಿರಂತರ ಯೋಗಿಯಾಗಿ ಬಿಡುತ್ತೀರಲ್ಲವೇ. ಏಕೆಂದರೆ ಪ್ರತಿ ಗಂಟೆಯಲ್ಲಿ ನಾನು' ಹಾಗೂ 'ನನ್ನದು' ಎಂಬ ಶಬ್ದವನ್ನು ಬಳಸುವಿರಿ. ಕಾರ್ಯವ್ಯವಹಾರದಲ್ಲಿಯೂ ಬಳಸಬೇಕಾಗುತ್ತದೆ ಅಲ್ಲವೇ? ಆದ್ದರಿಂದ ಎಷ್ಟು ಬಾರಿ ಇದನ್ನು ಪುನರಾವರ್ತಿಸುತ್ತೀರೋ ಅಷ್ಟು ಬಾರಿ ಭಲೇ ಬಾಯಿಂದಾದರೂ ಹೇಳಿ ಅಥವಾ ಮನಸ್ಸಿನಿಂದ ಯೋಚನೆ ಮಾಡಿದರೂ ನಾನು ಮತ್ತು ನನ್ನದು ಎಂಬ ಪದಗಳನ್ನು ಏನು ಮಾಡುತ್ತೀರಿ ಅರ್ಥವನ್ನು ಪರಿವರ್ತನೆ ಮಾಡುತ್ತೀರಿ ತಾನೇ? ಅಥವಾ ನನ್ನದು ನನ್ನದು ಎಂದು ಹದ್ದಿನಲ್ಲಿದ್ದು ಯೋಚಿಸುತ್ತೀರಾ? ಬೇಹದ್ದಿನಲ್ಲಿ (ಅಪರಿಮಿತದಲ್ಲಿ) ಹೋಗಬೇಕಲ್ಲವೇ ಯಾವಾಗ ಬೇಹದ್ದಿನ ಸ್ಮೃತಿಯ ಪರಿವರ್ತಕ ಅತ್ಮರಾಗಿದ್ದೀರಿ ಎಂದ ಮೇಲೆ ಹದ್ದಿನಲ್ಲಿ ಏಕೆ ಹೋಗುತ್ತೀರಿ. ಕೇವಲ ಭಾರತದ ಪರಿವರ್ತಕರಾಗಿಲ್ಲ ಅಲ್ಲವೇ? ಅಥವಾ ಡಬಲ್ ವಿದೇಶಿಯರು ಕೇವಲ ಫಾರಿನ್ ಪರಿವರ್ತಕರಂತೂ ಆಗಿಲ್ಲ ಅಲ್ಲವೇ? ವಿಶ್ವ ಪರಿವರ್ತಕರಾಗಿದ್ದೀರಿ ವಿಶ್ವ ಅರ್ಥಾತ್ ಅಪರಿಮಿತ ವಿಶ್ವ ಪರಿವರ್ತಕರಾಗಿದ್ದೀರಿ ಇದು ಪಕ್ಕಾ ನೆನಪಿದೆಯಲ್ಲವೇ? ಎಂದ ಮೇಲೆ ಸ್ವತಹವಾಗಿ ನಿರಂತರ ಯೋಗಿಯಾಗಿ ಸಹಜವಾಗಿ ಆಗಿ ಬಿಡುವಿರಿ. ಪರಿಶ್ರಮ ಪಡಬೇಕಾಗಿಲ್ಲ. ಏಕೆಂದರೆ ಭಾವ ಹಾಗೂ ಭಾವನೆ ಪರಿವರ್ತನೆ ಆಗಿ ಬಿಡುವುದು. ನಾನು ಆತ್ಮ ಎಂದು ಯೋಚಿಸಿದಾಗ ಪ್ರತಿಯೊಂದು ಕರ್ಮದಲ್ಲಿ, ಮಾತಿನಲ್ಲಿ, ಭಾವ ಬದಲಾಗುತ್ತದೆ ಮತ್ತು ಭಾವನೆಯೂ ಬದಲಾಗುತ್ತದೆ. ಭಾವ ಮತ್ತು ಭಾವನೆಯೇ ಮೋಸ ಮಾಡುತ್ತವೆ ಮತ್ತು ಸುಖವನ್ನು ಕೂಡ ಕೊಡುತ್ತವೆ. ಹಾಗಾದರೆ ಈ ಪರಿವರ್ತನೆಯನ್ನು ಮಾಡುತ್ತೀರಾ? ಏನು ಮಾಡುವುದು, ಹೇಗೆ ಮಾಡುವುದು ಎಂದು ಉತ್ತರಗಳನ್ನು ಬರೆಯಬಾರದು? ಎಲ್ಲರಿಂದ ಯಾವ ಉತ್ತರ ಬರುತ್ತದೆ ಓಕೆ ಓಕೆ ಎಂಬ ಉತ್ತರಗಳು ಬರುತ್ತವೆ ತಾನೆ? ಹೀಗಾಯಿತು ಹೀಗಾಯಿತು ಎಂದು ಬರುವುದಿಲ್ಲವಲ್ಲವೇ? ಬಾಪ್‌ದಾದಾರವರ ಹತ್ತಿರ ಎಲ್ಲರ ಉತ್ತರಗಳ ಫೈಲ್ ಇದೆ ಏನೇನು ಉತ್ತರಗಳನ್ನು ಬರೆದಿದ್ದಾರೆ ಎಂದು ಒಬ್ಬೊಬ್ಬರನ್ನು ನೋಡುತ್ತಾರೆ. ಮನಸ್ಸಿನಲ್ಲಿ ಏನನ್ನು ಯೋಚಿಸುತ್ತಾರೆಯೋ ಆ ಯೋಚನೆಗಳ ಎಲ್ಲರ ಕ್ಯಾಸೆಟ್ ಗಳು ಕೂಡ ಇವೆ.

ಹಾಗಾದರೆ ಹೊಸ ವರ್ಷದಲ್ಲಿ ಯಾವ ನವೀನತೆಯನ್ನು ತರಬೇಕು? ನವೀನತೆ ಎಲ್ಲರಿಗೂ ಇಷ್ಟವಾಗುತ್ತದೆ ಅಲ್ಲವೇ. ಹಳೆಯ ವಸ್ತುಗಳು ಶೋಕೇಸ್ ನಲ್ಲಿ ಇಡಲು ಇಷ್ಟಪಡುತ್ತಾರೆ. ಆದರೆ ಉಪಯೋಗಿಸಲು ಅಲ್ಲ. ಉಪಯೋಗಿಸಲು ಹೊಸದು ಬೇಕು ಎಂದುಕೊಳ್ಳುತ್ತಾರೆ. ಹಾಗೆಯೇ ಪ್ರತಿ ವಿಷಯದಲ್ಲಿ ನವೀನತೆ ಇರಬೇಕು ಸಂಕಲ್ಪವು ಹೊಸದಾಗಿ ಮತ್ತು ರಮಣೀಯತೆಯಿಂದ ಪುರುಷಾರ್ಥವನ್ನು ಮಾಡಿರಿ. ಒಮ್ಮೊಮ್ಮೆ ಕೆಲವರು ಮಕ್ಕಳು ಎಷ್ಟು ಹಠವಾಗಿ ಪುರುಷಾರ್ಥ ಮಾಡುತ್ತಿದ್ದಾರೆ ಎಂದರೆ ಅದನ್ನು ನೋಡಿ ಬಾಪ್‌ದಾದಾರವರಿಗೆ ದಯೆ ಬರುತ್ತದೆ. ಬಹಳ ಯುದ್ಧ ಮಾಡುತ್ತಿದ್ದಾರೆ ಅವಸರವಿಲ್ಲ ಆದರೂ ಮಾಡುತ್ತಿದ್ದಾರೆ. ಏಕೆ ಅವರ ಬಲಹೀನತೆಗಳ ಕಾರಣದಿಂದ, ಆದ್ದರಿಂದ ಶ್ರಮದಿಂದ ಪುರುಷಾರ್ಥವನ್ನು ಮಾಡಬೇಡಿ ಮಜಾದಿಂದ ಮಾಡಿರಿ. ಪುರುಷಾರ್ಥವನ್ನು ಕೂಡ ಮಜಾ ಮಜಾದಿಂದ ಮಾಡಿರಿ. ಮಜಾ ಇದೆ ಅಲ್ಲವೇ ಏನು ಮಾಡಬೇಕು ಯಾವುದೋ ಒಂದು ಸ್ಮೃತಿ ಅಂತೂ ಇರುತ್ತದೆ ಯಾವುದೋ ಒಂದು ಹೊಸ ವಿಷಯ ಇದ್ದೇ ಇರುತ್ತದೆ ಸ್ಮೃತಿ ಇರದೇ ಒಂದು ಕ್ಷಣವಾದರೂ ಇರುತ್ತೀರಾ? ಯಾವುದೋ ಒಂದು ಸ್ಮೃತಿ ಇದ್ದೇ ಇರುತ್ತದೆ. ಯಾವ ವಿಷಯವಾದರೂ, ವ್ಯಕ್ತಿಯಾದರೂ, ವಸ್ತುವಾದರೂ ಏನೋ ಒಂದು ನೆನಪಂತೂ ಇರುತ್ತದೆ ತಾನೇ. ಯಾವ ನೆನಪು ಇರದೇ ಇರುತ್ತೀರಾ? ಸ್ಮೃತಿಯಂತೂ ಮಾಡಲೇಬೇಕು ಆದರೆ ಯಾವುದನ್ನು? ಅರ್ಥದಿಂದ ಕೂಡಿರುವ ವಿಷಯವನ್ನು ಸ್ಮೃತಿ ಮಾಡಿರಿ. ಸ್ಮೃತಿ ಮಾಡುವುದು ಯಾರಿಗೆ ಬರುವುದಿಲ್ಲ, ನೆನಪು ಮಾಡುವುದು ಬರದವರು ಯಾರಾದರೂ ಇದ್ದೀರಾ, ಎಲ್ಲರಿಗೂ ಬರುತ್ತದೆ. ಚಿಕ್ಕಕುಮಾರಿಯರಿಗೆ ಕೂಡ ನೆನಪು ಮಾಡುವುದು ಬರುತ್ತದೆ. ಘಳಿಗೆ ಘಳಿಗೆಗೆ, ಕೆಳಗೆ ಬರಬೇಡಿರಿ. ಚಿಕ್ಕ ಮಕ್ಕಳಿಗೆ ಕುರ್ಚಿಯ ಮೇಲೆ ಕೂಡಿಸಿದಾಗ ಏನಾಗುತ್ತದೆ ಕೆಳಗೆ ಬಂದುಬಿಡುತ್ತಾರೆ. ತುಂಟತನದಿಂದ ಕೆಳಗೆ ಬಂದು ಬಿಡುತ್ತಾರೆ. ಹಾಗೆಯೇ ಮನಸ್ಸು ಕೂಡ ತುಂಟವಾಗಿಬಿಟ್ಟಿದೆ ಎಷ್ಟು ಸೀಟ್ ನ ಮೇಲೆ ಕೂಡಿಸಿದರೂ ಕೆಳಗೆ ಬಂದುಬಿಡುತ್ತಿದೆ. ನಿಮ್ಮ ಟೈಟಲ್, ನಶೆಯ ಸೀಟ್ನ ಮೇಲೆ ಸೆಟ್ಟಾಗಿ ಇದ್ದೀರಾ? ಚೆನ್ನಾಗಿ ಬರುತ್ತದೆಯೇ? ವಿಮಾನದಲ್ಲಿ ಕೂಡ ಯಾರು ಕೆಳಗೆ ಬೀಳದಂತೆ ಬೆಲ್ಟನ್ನು ಹಾಕುತ್ತಾರೆ. ಹಾಗೆಯೇ ನಿಮ್ಮ ಹತ್ತಿರವೂ ದೃಢ ಸಂಕಲ್ಪ ಎಂಬ ಬೆಲ್ಟ್ ಇದೆಯೇ? ಸ್ವಲ್ಪವಾದರೂ ಗೊಂದಲ ಬಂದರೆ ಬೆಲ್ಟನ್ನು ಹಾಕಿಕೊಳ್ಳಿರಿ.

ಈ ವರ್ಷದ ನವೀನತೆ ಏನೆಂದರೆ ಯಾರಿಂದಲೂ ನೆಗೆಟಿವ್ ಸಮಾಚಾರ ಬರುವುದಿಲ್ಲ. ಸರಿಯೇ? ಹೌದೋ, ಅಲ್ಲವೋ. ಈಗಲೂ ನಿಮ್ಮ ಮಾತು ಟೇಪ್ ನಲ್ಲಿ ತುಂಬುತ್ತದೆ ಕೇವಲ ತಂದೆಯೊಂದೇ ಅಲ್ಲ ನೀವೆಲ್ಲರೂ ಕೂಡ ಬೇಕೆಂದುಕೊಳ್ಳುತ್ತಿದ್ದೀರಿ. ಈಗಲೇ ಫರಿಶ್ತಾ ಆಗಿಬಿಡಬೇಕು ಎಂದು ಯೋಚಿಸುತ್ತಿದ್ದೀರಿ ತಾನೆ. (ಎಲ್ಲರೂ ಹೌದು ಎಂದರು) ಹೌದು ಎಂದು ಎಲ್ಲರೂ ಚೆನ್ನಾಗಿ ಹೇಳುತ್ತೀರಿ ಅದನ್ನು ಕೇಳಿ ತಂದೆ ಕೂಡ ಖುಷಿಯಾಗಿ ಬಿಡುತ್ತಾರೆ. ಆದರೆ ವ್ಯರ್ಥ ಪೇಪರ್ ಬಾಕ್ಸ್ ನಲ್ಲಿ ಹಾಕುವಂತಹ ಉತ್ತರಗಳು ಕೂಡ ಬರುತ್ತವೆ. ಮನಸ್ಸಿನಲ್ಲಿ ಓದಬೇಕೆಂದು ಕೂಡಾ ಅನಿಸದ ಉತ್ತರಗಳು ಬರುತ್ತವೆ. ಪೋಸ್ಟ್ ಕವರ್ ನೋಡಿದರೆ ಅಂತಹ ಸಮಾಚಾರ ಎಂದು ತಿಳಿದುಬಿಡುತ್ತದೆ. ಒಳ್ಳೆಯ ಉತ್ತರಗಳು ಕೂಡ ಬರುತ್ತವೆ, ಪ್ರೀತಿಯಿಂದ ತುಂಬಿರುವ ಉತ್ತರಗಳು ಕೂಡ ಬರುತ್ತವೆ, ಉತ್ಸಾಹ ಉಲ್ಲಾಸಗಳಿಂದ ತುಂಬಿರುವ ಉತ್ತರಗಳು ಕೂಡ ಬರುತ್ತವೆ, ಖುಷಿಯಿಂದ ಇರುವವರ ಉತ್ತರಗಳು ಕೂಡ ಬರುತ್ತವೆ, ಆದರೆ ವ್ಯರ್ಥವಿರುವ ಉತ್ತರಗಳು ಕೂಡ ಬರುತ್ತವೆ, ಇವುಗಳಿಂದ ಧನ ವ್ಯರ್ಥ, ಸ್ವಯಂನ ಮತ್ತು ಇತರರ ಸಮಯ ಕೂಡ ವ್ಯರ್ಥವಾಗುತ್ತದೆ.

ನಿಮ್ಮ ಸೇವಾಕೇಂದ್ರದಲ್ಲಿಯೂ ಈ ರೀತಿಯಾದ ಉತ್ತರಗಳನ್ನು ಬರೆಯುವವರು ಇದ್ದರೆ ಅವರನ್ನು ಪರಿವರ್ತನೆ ಮಾಡಿರಿ. ಈಗ ಈ ವರ್ಷ ಯಾವ ವರ್ಷವಾಗುತ್ತದೆ? ಆನಂದದ ವರ್ಷವಾಗುತ್ತದೆ ಫರಿಶ್ತಾ ಸ್ವರೂಪವಾಗಿ, ಫರಿಶ್ತಾ ಪ್ರಪಂಚದಲ್ಲಿ ಇರುವವರಂತೆ ಕಾಣಿಸಬೇಕು. ಎಲ್ಲಿ ನೋಡಿದರೂ ಅಲ್ಲಿ ಫರಿಶ್ತಾಗಳೇ ಕಾಣಿಸಬೇಕು. ಕೆಲವು ಫರಿಶ್ತಾಗಳು ಹಾರುತ್ತಾ, ಕೆಲವು ಫರಿಶ್ತಾಗಳು ಸಂದೇಶವನ್ನು ಕೊಡುತ್ತಾ, ಕೆಲವು ಫರಿಶ್ತಾಗಳು ಕೆಳಗೆ ಭೂಮಿಯ ಮೇಲೆ ಬಂದು ಕರ್ಮೇಂದ್ರಿಯಗಳಿಂದ ಕರ್ಮವನ್ನು ಮಾಡುತ್ತಿದ್ದಾರೆ- ಎಂದು ಕಾಣಿಸಬೇಕು. ದೃಷ್ಟಿ ಬದಲಾಗಬೇಕು ಎಲ್ಲಿ ನೋಡಿದರೂ ಫರಿಶ್ತಾಗಳ ಪ್ರಪಂಚ ಕಾಣಿಸಬೇಕು. ದೃಷ್ಟಿ ಪರಿವರ್ತನೆ ಯಾಗಬೇಕು, ವೃತ್ತಿ ಪರಿವರ್ತನೆಯಾಗಬೇಕು. ಒಳ್ಳೆಯದು.

ಈಗ ಯಾವ ಸೇವೆಯನ್ನು ಮಾಡುತ್ತೀರಿ? ಈ ವರ್ಷದಲ್ಲಿ ಯಾವುದಾದರೂ ವಿಶೇಷ ಸೇವೆಯನ್ನು ಮಾಡುತ್ತೀರಾ? ಏನು ಮಾಡುತ್ತೀರಿ? ಮೇಳ ಮಾಡುತ್ತೀರಾ, ಪ್ರದರ್ಶನಿಯನ್ನು ಇಡುತ್ತೀರಾ, ಕಾನ್ಫರೆನ್ಸ್ ಮಾಡುತ್ತೀರಾ? ಇವಂತೂ ಮಾಡುತ್ತಲೇ ಇದ್ದೀರಿ. ಆದರೆ ಯಾವ ನವೀನತೆಯನ್ನು ತರುತ್ತೀರಿ? ಬಾಪ್‌ದಾದಾರವರ ಒಂದು ಸಂಕಲ್ಪವನ್ನು ಮಕ್ಕಳು ಇನ್ನೂ ಪೂರ್ತಿ ಮಾಡಿಲ್ಲ. ಬಾಪ್‌ದಾದಾ ಮಾತು ಮಾತಿಗೆ ತಿಳಿಸುತ್ತಿದ್ದಾರೆ, ವರ್ತಮಾನ ಸಮಯದಲ್ಲಿ ಕ್ವಾಂಟಿಟಿ (ಸಂಖ್ಯೆ)ಯನ್ನಾದರೆ ಹೆಚ್ಚಿಸುತ್ತಿದ್ದೀರಿ ಆದರೆ ಕ್ವಾಲಿಟಿ ಅರ್ಥಾತ್ ವಾರಸುದಾರರು ಬೇಕು. ಇಷ್ಟು ಜನರನ್ನು ಹೆಚ್ಚಿಸಿದ್ದೇವೆ ಎಂದು ಲಿಸ್ಟ್ ನಲ್ಲಿ ಬರೆಯುತ್ತಿದ್ದೀರಿ. ಉಡುಗೊರೆಯನ್ನೂ ಪಡೆದಿದ್ದೀರಲ್ಲವೇ ಬಾಪ್‌ದಾದಾ ಕೇಳಿದರು, ಬೆಳ್ಳಿಯ ಗ್ಲಾಸನ್ನು ಉಡುಗೊರೆಯಾಗಿ ತೆಗೆದುಕೊಂಡಿದ್ದೀರಿ ಇದು ಒಳ್ಳೆಯ ವಿಷಯ ಏಕೆಂದರೆ ರಾಜಧಾನಿಯಲ್ಲಿ ಎಲ್ಲಾ ವಿಧವಾಗಿರುವವರು ಬೇಕು. ಆದರೆ ಈಗ ಬಹಳ ಸಮಯದಿಂದ ವಾರಸುದಾರರ ಕ್ವಾಲಿಟಿ ಇರುವವರು ಬಹಳ ಕಡಮೆ ಬರುತ್ತಿದ್ದಾರೆ. ಸಂಪರ್ಕದಲ್ಲಿ ಬರುವವರು ಹೆಚ್ಚುತ್ತಿದ್ದಾರೆ. ಸಂಖ್ಯೆ ಕೂಡ ಹೆಚ್ಚಾಗುತ್ತಿದೆ ಇದು ಕೂಡ ಡ್ರಾಮಾಸಾರ ನಡೆಯಲೇಬೇಕು ಮತ್ತು ಇದು ಅವಶ್ಯಕವೇ ಆದರೆ ಈಗ ವಾರಸರ ಕ್ವಾಲಿಟಿ ಪ್ರತ್ಯಕ್ಷವಾಗುವುದು ಮಿಸ್ ಆಗುತಿದೆ. ಕ್ವಾಂಟಿಟಿ ಅರ್ಥಾತ್ ಸಂಖ್ಯೆಯನ್ನು ನೋಡಿ ಬಾಪ್‌ದಾದಾ ಕೂಡ ಖುಷಿಪಡುತ್ತಿದ್ದಾರೆ ಆದರೆ ಜೊತೆ ಜೊತೆಗೆ ಇದರ ಮೇಲೆ ಕೂಡ ಗಮನವಿಡಿ. ಇನ್ನೊಂದು ವಿಷಯವೇನೆಂದರೆ ಈಗ ಜ್ಞಾನ ಸರೋವರವು ತಯಾರಾಗಬೇಕು ಮತ್ತು ಇದನ್ನು ವಿಶೇಷವಾಗಿ ತಯಾರು ಮಾಡಲೇಬೇಕು. ಸಂಪರ್ಕದಲ್ಲಿ ಬಂದವರನ್ನು ವಾರಸರನ್ನಾಗಿ ತಯಾರು ಮಾಡಲು ಬಾಪ್‌ದಾದಾ ಇಷ್ಟಕ್ಕೂ ಮುಂಚೆ ಕೂಡ ತಿಳಿಸಿದ್ದಾರೆ. ಜ್ಞಾನ ಸರೋವರ ಸೇವಾ ವೃದ್ಧಿಗೆ ಖಜಾನೆ ಎಂದು, ಯಾವಾಗ ಸೇವಾಸ್ಥಾನ ತಯಾರಾಗುತ್ತದೆಯೋ ಮತ್ತು ತಯಾರಾಗಲೇಬೇಕು, ತಯಾರಾಗಿಯೇ ಇದೆಯೋ ಆಗ ಸೇವೆ ಕೂಡ ಮಾಡುತ್ತೀರಾ ಅಥವಾ ಕೇವಲ ನೋಡಿ ಬಹಳ ಚೆನ್ನಾಗಿ ತಯಾರಾಗಿದೆ ಬಹಳ ಚೆನ್ನಾಗಿ ತಯಾರಾಗಿದೆ ಎಂದು ಖುಷಿ ಪಡುತ್ತೀರಾ. ಒಂದು ವಿಶಾಲವಾದ ಪ್ರೋಗ್ರಾಮ್‌ಅನ್ನು ತಯಾರು ಮಾಡಿರಿ. ಹೇಗಾದರೆ ಯಾವುದಾದರೂ ವಿಶೇಷ ಸ್ಥಾನ ತಯಾರು ಮಾಡಿದಾಗ ವಿಶೇಷ ಸ್ಥಾನದ ಸೆರ್ಮನಿಯಲ್ಲಿ ಬೇರೆ ಬೇರೆ ದೇಶದವರ ನೀರನ್ನು ಮತ್ತು ಮಣ್ಣನ್ನು ಒಂದು ಕಡೆ ಹಾಕುತ್ತಾರೆಯೋ ಹಾಗೆಯೇ ನೀವು ನೀರು ಮತ್ತು ಮಣ್ಣನ್ನು ಹಾಕುತ್ತಿಲ್ಲ ಆದರೆ ವಿಶ್ವದಲ್ಲಿ ಒಂದು ದೇಶ ಕೂಡ ಉಳಿಯಬಾರದು. ಎಲ್ಲಾ ಕಡೆಯಿಂದ ಬರಬೇಕು ದೇಶ ವಿದೇಶಗಳಲ್ಲಿ ಯಾವ ವಿಧ ವಿಧವಾದ ದೇಶಗಳಿವೆಯೋ ಅವುಗಳಿಂದ ಒಬ್ಬೊಬ್ಬರು ತಪ್ಪದೇ ಬರಬೇಕು ಇದನ್ನೇ ಇಂಟರ್ನ್ಯಾಷನಲ್ ಎಂದು

ಕರೆಯುತ್ತಾರಲ್ಲವೇ ಅಥವಾ ಲಂಡನ್ನಿಂದ ಇಬ್ಬರು, ನಾಲ್ಕು ಜನ, ಅಮೆರಿಕಾದಿಂದ ಇಬ್ಬರು, ನಾಲ್ಕು ಜನ ಬಂದರೆ ಇಂಟರ್ನ್ಯಾಷನಲ್ ಎಂದು ಕರೆಯುತ್ತಾರೆಯೇ? ಆದ್ದರಿಂದ ಇಂಟರ್ನ್ಯಾಷನಲ್ ಪ್ರೋಗ್ರಾಮ್ ತಯಾರು ಮಾಡಿರಿ ಈಗ ಡಬಲ್ ಸ್ಥಾನವಾಗಿದೆಯಲ್ಲವೇ, ಇಲ್ಲದಿದ್ದರೆ ಸ್ಥಾನ ಬೇಕು, ಅದು ಬೇಕು, ಸೌಕರ್ಯಗಳು ಬೇಕು ಎನ್ನುತ್ತೀರಾ? ಈಗ ಜ್ಞಾನ ಸರೋವರದ ಸ್ಥಾನ ಕೂಡ ಲಭಿಸಿದೆ ಆದ್ದರಿಂದ ಈ ವರ್ಷದಲ್ಲಿ ದೇಶವಿದೇಶದವರಿಬ್ಬರೂ ಸೇರಿ ಇಬ್ಬರ ಸಲಹೆಯಿಂದ, ಇಬ್ಬರ ಪ್ಲಾನ್ ನಿಂದ, ಇಬ್ಬರು ಹಾಗೆಯೇ ಎಂಬುವಂತೆ, ಇಬ್ಬರ ಸಮಾನತೆಯಿಂದ ಪ್ರೋಗ್ರಾಮನ್ನು ತಯಾರು ಮಾಡಿರಿ. ಇದರಿಂದ ದೇಶದವರು ಕೂಡ ನಮಗೆ ಯೋಗ್ಯವಾಗಿದೆ ಎನ್ನಬೇಕು ಮತ್ತು ವಿದೇಶದವರು ಕೂಡ ನಮಗೆ ಯೋಗ್ಯವಾಗಿದೆ ಎನ್ನಬೇಕು. ವಿದೇಶದ ವಿಧಿ ಮತ್ತು ದೇಶದ ವಿಧಿ ಎರಡು ವಿಧಿಗಳನ್ನು ಬೆರೆಸಿ ಒಬ್ಬರನ್ನೊಬ್ಬರು ಮುಂದೆ ಇಟ್ಟು ದೇಶದವರು ವಿದೇಶದವರನ್ನು ಮುಂದೆ ಇಡಬೇಕು, ವಿದೇಶದವರು ದೇಶದವರನ್ನು ಮುಂದೆ ಇಡಬೇಕು ಮತ್ತು ಯಾವ ಒಂದು ದೇಶವು ವಂಚಿತವಾಗಬಾರದು. ಅಂತಹ ಒಂದು ಒಳ್ಳೆಯ ಪ್ರೋಗ್ರಾಮನ್ನು ತಯಾರು ಮಾಡಿರಿ. ವಿದೇಶದವರು ಹೇಳಿರಿ ನಡೆಯುತ್ತದೆಯೇ? ನಡೆಯಲೇಬೇಕು ತಾನೆ, ದೇಶದವರು ಹೇಳಿರಿ ಮಾಡಬೇಕಾ? ಒಳ್ಳೆಯದು. ಇವರಿಗೆ(ದಾದಿ) ಸಂಕಲ್ಪವಿದೆ.  ದಾದಿಗೆ ಸಂಕಲ್ಪಗಳು ಬಹಳ ಬರುತ್ತವೆ. ಸೇವೆಯ ಬಗೆಗಿನ ಸಂಕಲ್ಪಗಳು ನಿದ್ದೆ ಮಾಡಲು ಬಿಡುವುದಿಲ್ಲ. ಶುದ್ಧ ಸಂಕಲ್ಪಗಳಿಂದ ನಿದ್ದೆ ಕಡಿಮೆಯಾದರೂ ಅದರ ಪ್ರಭಾವವು ಬೀಳುವುದಿಲ್ಲ ಸಾಮಾನ್ಯವಾಗಿ ನಿದ್ದೆ ಕಡಿಮೆಯಾದರೆ ಬಲಹೀನತೆ ಬರುತ್ತದೆ. ಎಲ್ಲರೂ ಮಣ್ಣನ್ನು ತರಬೇಕಾಗಿರುವ ಅವಶ್ಯಕತೆ ಇಲ್ಲ. ಆದರೆ ಎಲ್ಲರ ಸಂಕಲ್ಪಗಳ ಮಣ್ಣನ್ನು ಒಟ್ಟುಗೂಡಿಸಬೇಕು ಪ್ರಪಂಚದವರಂತೂ ಮಣ್ಣೇ ಮಣ್ಣನ್ನು ಮಾಡುತ್ತಾರಲ್ಲವೇ. ಮಣ್ಣು ಮಣ್ಣಿನೊಂದಿಗೆ ಬೆರೆತು ಹೋಗುತ್ತದೆ ಮತ್ತು ಈ ಎಲ್ಲರ ಸಂಕಲ್ಪಗಳು ಎಲ್ಲಾ ಕಡೆ ವಿಶ್ವದಲ್ಲಿ ಧ್ವನಿಯನ್ನು ವ್ಯಾಪಿಸುತ್ತವೆ. ಯಾವ ದೇಶವಾದರೂ ಏಕೆ ವಂಚಿತವಾಗಿರಬೇಕು ಮತ್ತು ಯಾವ ದೇಶದಿಂದಾದರೂ ಒಬ್ಬರು ಬಂದರೂ ಪೇಪರ್ನಲ್ಲಿ ಬರುತ್ತಾರೆ. ಆಗ ವಿಶ್ವದಲ್ಲಿ ನಾಲ್ಕೂ ಕಡೆ ಸೇವೆ ಕೂಡ ಆಗುತ್ತದೆ. ಆದರೆ ಬಾಪ್‌ದಾದಾ ಈ ವರ್ಷದಲ್ಲಿ ದೇಶವಿದೇಶಗಳ ವಿಧಿ ಬೆರೆಯುವ ಪ್ರೋಗ್ರಾಮ್‌ಅನ್ನು ಬಯಸುತ್ತಿದ್ದಾರೆ ವಿದೇಶದವರು ಕೂಡ ಹಿಂದಕ್ಕೆ ಹೋಗಿ ಬಿಡಬಾರದು, ದೇಶದವರು ಕೂಡ ಹಿಂದಕ್ಕೆ ಹೋಗಬಾರದು, ಯೋಚನೆಗಳು ಕೂಡ ಬೆರೆಯಬೇಕಲ್ಲವೇ. ಒಬ್ಬರನ್ನೊಬ್ಬರು ಮುಂದೆ ನೀವು ಎಂದುಕೊಳ್ಳಿರಿ ಆಗ ಚೆನ್ನಾಗಿ ಆಗುತ್ತದೆಯಲ್ಲವೇ!

ಜ್ಞಾನ ಸರೋವರದ ಪ್ರೋಗ್ರಾಮ್ ಹೇಗೆ ತಯಾರು ಮಾಡಬೇಕೆಂದರೆ ವಿಶ್ವದಲ್ಲಿ ಈ ವಿಧವಾದ ಸೇವಾ ಸಮಾಚಾರ ಯಾವ ಸ್ಥಾನದಿಂದಲೂ ಬರದಂತೆ ಇರಬೇಕು.  ಯು ಎಸ್ ನಲ್ಲಿ ಅಥವಾ ಅದಕ್ಕಿಂತಲೂ ದೊಡ್ಡ ಸ್ಥಾನದಲ್ಲಾದರೂ ಅದಕ್ಕಿಂತ ದೊಡ್ಡ ಸ್ಥಾನವಾಗಬೇಕು. ಇದರಲ್ಲಿ ಎಲ್ಲರ ತನುವನ್ನೂ ಉಪಯೋಗಿಸಿದ್ದೀರಿ, ಮನಸ್ಸನ್ನು ಕೂಡ ಉಪಯೋಗಿಸಿದ್ದೀರಿ ಮತ್ತು ಚಿಕ್ಕ ಮಕ್ಕಳಿಂದ ವೃದ್ಧರವರೆಗೆ ಎಲ್ಲರೂ ಧನವನ್ನು ಕೂಡ ಉಪಯೋಗಿಸಿದ್ದೀರಿ ಅರ್ಥಾತ್ ಎಲ್ಲರೂ ಸಹಯೋಗವೆಂಬ ಬೆರಳನ್ನು ಕೊಟ್ಟಿದ್ದೀರಿ. ಅದೇ ರೀತಿ ಸೇವೆಯಲ್ಲೂ ಕೂಡ ಎಲ್ಲರ ಸಹಯೋಗದ ಬೆರಳು ಇರಬೇಕು. ಪ್ಲಾನನ್ನು ಕೊಡುತ್ತಾ ಹೋಗಿರಿ ಆದರೆ ಪ್ಲಾನ್ ತಯಾರು ಮಾಡುವ ಸಮಯದಲ್ಲಿ ಬಾಲಕರಾಗಿರಿ. ಪ್ಲಾನ್ ಕೊಡುವ ಸಮಯದಲ್ಲಿ ಮಾಲೀಕರಾಗಿ ಕೊಡಿ ಮತ್ತು ಬಹಳಷ್ಟು ಜನ ಯಾವುದನ್ನಾದರೆ ಫೈನಲ್

ಮಾಡುತ್ತಾರೆಯೋ ಆಗ ಮಕ್ಕಳಾಗಿ ಬಿಡಬೇಕು. ಮಕ್ಕಳು ಏನು ಮಾಡುತ್ತಾರೆ? ಹಾಗೆಯೆ ಎನ್ನುತ್ತಾರೆ ಮತ್ತು ಮಾಲೀಕ ಏನು ಹೇಳುತ್ತಾರೆ? ಹೀಗೆ ಮಾಡಿರಿ. ಬಾಲಕರಾಗಿ ಮತ್ತು ಮಾಲೀಕರಾಗಿರಿ ಪ್ಲಾನ್ ಕೊಡುವುದು ಒಳ್ಳೆಯದೇ ಆದರೆ ಆ ಪ್ಲಾನೇ ಆಗಬೇಕು ಎಂದು ಯೋಚಿಸಬೇಡಿ. ಯಾವುದು ನಡೆಯುತ್ತದೆಯೋ ಅದು ಒಳ್ಳೆಯದು. ತೊಲಗಿಸಬೇಡಿರಿ, ಪ್ಲಾನ್ ಕೊಡಿ ಆದರೆ ಬಾಲಕರಾಗಿಯೂ ಇರಿ, ಮಾಲೀಕರಾಗಿಯೂ ಇರಿ. ಪ್ಲಾನ್ ತಯಾರು ಮಾಡುವ ಸಮಯದಲ್ಲಿ ಮಾಲೀಕರು ಮತ್ತು ಫೈನಲ್ ಆಗುವ ಸಮಯದಲ್ಲಿ ಬಾಲಕರಾಗಬೇಕು. ಬಾಲಕ ಮತ್ತು ಮಾಲೀಕರಾಗುವುದು ಬರುತ್ತದೆಯೇ ಏಕೆಂದರೆ ಎಲ್ಲರೂ ತಿಳುವಳಿಕೆಯುಳ್ಳವರಾಗುತ್ತಿದ್ದೀರಿ ಅಲ್ಲವೇ. ಬೇಗನೆ ಮಾಲೀಕರಾಗುತ್ತಿದ್ದೀರಿ. ಈಗ ತಿಳಿಯಿತೇ ಹೊಸ ವರ್ಷದಲ್ಲಿ ಏನು ಮಾಡಬೇಕು? ಸೇವೆ ಕೂಡ ಮಾಡಬೇಕು ಮತ್ತು ಸೇವೆಗಿಂತ ಮೊದಲು ಸ್ವಯಂಪರಿವರ್ತಕರಾಗಬೇಕು. ಎರಡೂ ಬೇಕಲ್ಲವೇ?

ಹೊಸ ವರ್ಷವನ್ನು ಆಚರಿಸಿಕೊಳ್ಳುತ್ತಿದ್ದೀರಿ. ಆಚರಿಸಿಕೊಳ್ಳುವುದು ಅರ್ಥಾತ್ ತಯಾರಾಗುವುದು ಮತ್ತು ತಯಾರು ಮಾಡುವುದು. ಇದೇ ಆಚರಿಸಿಕೊಳ್ಳುವುದಲ್ಲವೇ. ಅಥವಾ ಕೇವಲ ನಾಟ್ಯವನ್ನು ಮಾಡುವುದೇ ಆಚರಿಸಿಕೊಳ್ಳುವುದೇ? ಇದು ಕೂಡ ಮಾಡಿರಿ. ನಾಟ್ಯ ಮಾಡುವುದು ಕೂಡ ಬಾಪ್‌ದಾದಾರವರಿಗೆ ಇಷ್ಟವೆನಿಸುತ್ತದೆ ಆದರೆ ಮನಸ್ಸಿನಿಂದ ನಾಟ್ಯ ಮಾಡಿರಿ ಬಾಪ್‌ದಾದಾ ಹಾಡುಗಳನ್ನು ಕೇಳುತ್ತಾರೆ ಮತ್ತು ನಾಟ್ಯ ಕೂಡ ನೋಡುತ್ತಾರೆ ಯಾವ ಪ್ರೋಗ್ರಾಮನ್ನನೂ ಮಿಸ್ ಮಾಡುತ್ತಿಲ್ಲ ಏಕೆ? ನೋಡಿರಿ ನೀವು ಯಾವುದಾದರೂ ಪ್ರೋಗ್ರಾಮ್ ಮಾಡುತ್ತಿರುವಾಗ ಮೊದಲ ಹಾಡಿನಲ್ಲಿ ತಂದೆಯನ್ನು ಸ್ಮೃತಿ ಮಾಡುತ್ತಿರಲ್ಲವೇ, ತಂದೆಯನ್ನು ಸ್ಮೃತಿ ಮಾಡಿದರೆ ತಂದೆ ಬರಲೇ ಬೇಕಾಗಿರುತ್ತದೆ ಮತ್ತು ನೋಡಲೇಬೇಕಾಗುತ್ತದೆ. ಪ್ರೋಗ್ರಾಮನ್ನು ಇಟ್ಟರೆ ಬಾಪ್‌ದಾದಾರವರಿಗೆ ಕೂಡ ಇಷ್ಟವೆನಿಸುತ್ತದೆ ಒಳ್ಳೆಯದು.

**ನಾಲ್ಕು ಕಡೆ ಇರುವ ನವಯುಗ ರಾಜ್ಯಾಧಿಕಾರಿ ಶ್ರೇಷ್ಠಾತ್ಮರಿಗೆ, ಸದಾ ಸ್ವ ಪರಿವರ್ತನೆ ಮತ್ತು ವಿಶ್ವ ಪರಿವರ್ತನೆಗೆ ನಿಮಿತ್ತವಾಗಿರುವ ವಿಶೇಷ ಆತ್ಮರಿಗೆ, ಸದಾ ಪುರುಷಾರ್ಥದಲ್ಲಿ ನವೀನತೆ, ಶ್ರೇಷ್ಠತೆಯನ್ನು ತರುವ ಸರ್ವಸ್ನೇಹಿ ಆತ್ಮರಿಗೆ, ಸದಾ ತಂದೆಯ ಹೆಸರನ್ನು ಪ್ರತ್ಯಕ್ಷ ಮಾಡುವ ಸುಪುತ್ರರಿಗೆ, ಸದಾ ನನ್ನದು ಮತ್ತು ನಾನು ಎಂಬುದನ್ನು ಯಥಾರ್ಥ ಭಾವ ಮತ್ತು ಅರ್ಥದಲ್ಲಿ ತರುವ ಸಹಜ ಯೋಗಿ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 31-12-1994.

***ಹೊಸ ವರ್ಷವನ್ನು ಶುಭ ಭಾವನೆ, ಗುಣಸ್ವರೂಪ ವರ್ಷವನ್ನಾಗಿ ಆಚರಿಸಿ.***

ಹೊಸ ವರ್ಷವನ್ನು ನೋಡಿ ನಿಮ್ಮ ನವಯುಗದ ನೆನಪು ಬರುತ್ತದೆಯೇ? ನವಯುಗದಲ್ಲಿ ಹಳೆಯ ವಸ್ತುವಿನ ನಾಮ, ರೂಪಗಳೇ ಇರುವುದಿಲ್ಲ ಎಲ್ಲವೂ ಹೊಸದಾಗಿರುತ್ತದೆ. ಹೊಸ ವ್ಯಕ್ತಿಗಳು ಅರ್ಥಾತ್ ಎಲ್ಲರೂ ಸತೋ ಪ್ರಧಾನರಾಗಿರುತ್ತಾರೆ ಹಾಗೂ ಪ್ರಕೃತಿಯು ಸಹ ಸತೋ ಪ್ರಧಾನ ಅರ್ಥಾತ್ ಹೊಸದಾಗಿರುತ್ತದೆ. ಸೇವೆಯಲ್ಲಿ ಎಲ್ಲರೂ

ಸಹಯೋಗದ ಬೆರಳನ್ನು ಕೊಡುತ್ತಾ ಹೋಗಬೇಕು. ಪ್ಲಾನನ್ನು ಕೊಡುವಾಗ ಮಾಲೀಕರಾಗಿ ಮತ್ತು ಫೈನಲ್ ಮಾಡುವಾಗ ಬಾಲಕರಾಗಬೇಕು ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸ್ನೇಹ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನವಯುಗದ ರಾಜ್ಯಾಧಿಕಾರಿ ಆಗಿದ್ದೇನೆ.

2. ಬಾಪ್‌ದಾದಾ ನನ್ನ ಮಸ್ತಕದಲ್ಲಿ ಹೊಳೆಯುತ್ತಿರುವ ಮಣಿ ಮತ್ತು ಶ್ರೇಷ್ಠಭಾಗ್ಯದ ರೇಖೆಯನ್ನು ನೋಡುತ್ತಿದ್ದಾರೆ.

3. ನಾನು ನನ್ನ ಹಳೆಯ ಸಂಸ್ಕಾರ ಮತ್ತು ಮಾಯೆಗೆ ಅಂಶ,ವಂಶ ಸಹಿತವಾಗಿ ಸದಾಕಾಲದ ಬೀಳ್ಕೊಡುಗೆಯನ್ನು ಕೊಟ್ಟಿದ್ದೇನೆ.

4. ನಾನು ಸದಾ ಹಾರುವ ಕಲೆಯಲ್ಲಿರುವ ಫರಿಶ್ತಾ.

5. ನಾನು ನನ್ನ ಫರಿಶ್ತಾ ದೃಷ್ಟಿ ಮತ್ತು ವೃತ್ತಿಯಿಂದ ಇತರರನ್ನು ಕೂಡ ಫರಿಶ್ತಾ ಸ್ವರೂಪದಲ್ಲಿಯೇ ನೋಡುತ್ತಿದ್ದೇನೆ.

6. ನಾನು ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆಯನ್ನು ಮಾಡುವ ವಿಶ್ವ ಪರಿವರ್ತಕನು.

7. ನಾನು ಯಾರ ಬಲಹೀನತೆಯನ್ನು ಕೇಳುವುದಿಲ್ಲ, ನೋಡುವುದಿಲ್ಲ, ಮಾತನಾಡುವುದಿಲ್ಲ ಎಂಬ ದೃಢ ಪ್ರತಿಜ್ಞೆಯನ್ನು ಮಾಡಿರುವ ಶುಭಭಾವನಾ ಗುಣಮೂರ್ತಿ.

8. ನಾನು ಅಶುಭ ವಿಷಯವನ್ನು ಕೂಡ ಶುಭ ಭಾವನೆಯ ದೃಷ್ಟಿಯಿಂದ ನೋಡಿ ಕಾರಣವನ್ನು ನಿವಾರಣೆಯಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

9. ನಾನು ಪರಿಶ್ತಾ ಆಗಿ ಸಮಯವನ್ನು ಸಮೀಪಕ್ಕೆ ತಂದಿದ್ದೇನೆ.

10. ನಾನು ಬ್ರಾಹ್ಮಣ ಪರಿವಾರದಲ್ಲಿ, ಇತರ ಆತ್ಮರ ಸಂಬಂಧ ಸಂಪರ್ಕದಲ್ಲಿ ಮಧುರ ಮಾತುಗಳ, ಸ್ನೇಹದ ಮಾತುಗಳ, ಯಾವುದಾದರೂ ಒಂದು ಗುಣದ, ಶಕ್ತಿಯ, ನನ್ನ ಶ್ರೇಷ್ಠ ಭಾವನೆ, ಶ್ರೇಷ್ಠ ಕಾಮನೆಯ ವೃತ್ತಿಯಿಂದ, ಸೆಕೆಂಡಿನ ಸಂಕಲ್ಪದಿಂದ ದೃಷ್ಟಿಯಿಂದ, ನನ್ನ ಹೃದಯದ ಮುಗುಳ್ನಗೆಯಿಂದ, ಕ್ಷಣದಲ್ಲಿಯೇ ಬಹಳಷ್ಟು ಉಡುಗೊರೆಗಳನ್ನು ಕೊಡುವ ದಾತನಾಗಿದ್ದೇನೆ.

11. ನಾನು ಇತರರ ನೆಗೆಟಿವ್ ಅನ್ನು ಪಾಸಿಟಿವ್ ನಲ್ಲಿ ಬದಲಿಸಿ ಸ್ನೇಹವನ್ನು ಕೊಟ್ಟು, ಸ್ನೇಹವನ್ನು ಪಡೆಯುವ ಸ್ನೇಹ ಸ್ವರೂಪ.

12. ನಾನು ನಾನು ಎಂಬ ಪದ ಬಂದಾಗಲೆಲ್ಲ ಆತ್ಮನನ್ನು ಮತ್ತು ನನ್ನದು ಎಂಬ ಪದ ಬಂದಾಗಲೆಲ್ಲ ಪರಮಾತ್ಮ ನನ್ನವರು ಎಂಬ ಸ್ಮೃತಿಯಲ್ಲಿರುವ ನಿರಂತರಯೋಗಿ.

13. ನಾನು, ನನ್ನದು ಎಂಬ ಪದಗಳನ್ನು ಬೇಹದ್ದಿನಲ್ಲಿ ಪರಿವರ್ತನೆ ಮಾಡಿರುವ ವಿಶ್ವ ಪರಿವರ್ತಕನು.

14. ನಾನು ವಿಶ್ವ ಪರಿವರ್ತಕನು ಎಂಬ ಸ್ಮೃತಿಯಿಂದ ಪ್ರತಿಯೊಂದು ಕರ್ಮದಲ್ಲಿ, ಮಾತಿನಲ್ಲಿ, ಭಾವ ಮತ್ತು ಭಾವನೆಯ ಸುಖವನ್ನು ಪಡೆದಿದ್ದೇನೆ.

15. ನನ್ನ ಸಂಕಲ್ಪದಲ್ಲಿ ನವೀನತೆ, ಪುರುಷಾರ್ಥದಲ್ಲಿ ಮಜಾ ಮತ್ತು ರಮಣೀಯತೆ ಇದೆ.

16. ನಾನು ದೃಢಸಂಕಲ್ಪವೆಂಬ ಬೆಲ್ಟಿನಿಂದ ಮನಸ್ಸಿನ ಗೊಂದಲವನ್ನು ಸಮಾಪ್ತಿ ಮಾಡಿದ್ದೇನೆ.

17. ನನ್ನ ದೃಷ್ಟಿ ಮತ್ತು ವೃತ್ತಿಯಿಂದ ವಿಶ್ವಾತ್ಮರನ್ನು, ಸೃಷ್ಟಿಯನ್ನು ಪರಿವರ್ತನೆ ಮಾಡುವ ಅವ್ಯಕ್ತ ಫರಿಶ್ತಾ .

18. ನಾನು ಸೇವೆಯಲ್ಲಿ ಒಬ್ಬರನ್ನು ಇನ್ನೊಬ್ಬರು ಇವರು ಮೊದಲು ಎಂಬುದರಿಂದ ಸಫಲತೆ ಬಂದಿದೆ.

19. ನಾನು ಸೇವೆಯಲ್ಲಿ ಕೂಡ ಸಹಯೋಗವೆಂಬ ಬೆರಳನ್ನು ಕೊಟ್ಟಿದ್ದೇನೆ.

20. ನಾನು ಪ್ಲಾನ್ ಅನ್ನು ತಯಾರು ಮಾಡಿಕೊಡುವಾಗ ಮಾಲೀಕನಾಗಿ ಮತ್ತು ಫೈನಲ್ ಮಾಡುವಾಗ ಬಾಲಕನಾಗಿ ಇದ್ದೇನೆ.

21. ನಾನು ಆಚರಿಸಿಕೊಳ್ಳುವುದು ಎಂದರೆ ತಯಾರಾಗುವುದು ಮತ್ತು ತಯಾರು ಮಾಡುವುದು ಎಂಬ ಸ್ಮೃತಿಯಲ್ಲಿದ್ದೇನೆ.